ಅರಿವಿನ ಜಾಗೃತಿ

ಮತ್ತು

ಸಾಕ್ಷರತೆ

ಭಾಗ-೨

ಪ್ರೇರಕರ ಕೈಪಿಡಿ

ಕಿರಣ ಕಮಲ ಪ್ರಸಾದ



ಜನ ಜಾಗೃತಿ

ನಂ. 10, ಶ್ರೀನಿಧಿ, ನಾಗರಭಾವಿ ಹಳ್ಳಿ ಮತ್ತು ಅಂಚೆ

ಬೆಂಗಳೂರು- 560 072

ಅರಿವಿನ ಜಾಗೃತಿ

ಮತ್ತು

ಸಾಕ್ಷರತೆ

ಕರ್ನಾಟಕ ಹಳ್ಳಿಗಳ ಪರಿಸ್ಥಿತಿ ಹಾಗೂ ಕನ್ನಡ ಭಾಷೆಗಳಿಗೆ ಅನ್ವಯಿಸುವಂತೆ
ಸಿದ್ಧಪಡಿಸಿದ ಅರಿವಿನ ಜಾಗೃತಿಯ ಕಾರ್ಯಕ್ರಮ

ಭಾಗ-೨

ಪ್ರೇರಕರ ಕೈಪಿಡಿ

ಅರಿವಿನ ಜಾಗೃತಿಯನ್ನು ಹಳ್ಳಿಯ ಬಾಲಕಾರ್ಮಿಕರ ಸೇತುಶಿಕ್ಷಣಕ್ಕೆ ಅಳವಡಿಸಲು ಮಾರ್ಗದರ್ಶನಗಳು

ಸಿದ್ಧಪಡಿಸಿದವರು:

ಕಿರಣ ಕಮಲ ಪ್ರಸಾದ

ಚಟುವಟಿಕೆಗಳಿಗೆ ಸಹಕಾರ : ಡಿ. ವೆಂಕಟೇಶ್, ಕೆ. ಟಿ. ನಾಗೇಶ್

ಚಿತ್ರಗಳಿಗೆ ಸಹಕಾರ : ಮಗಿಮೈ ಪ್ರಕಾಶಮ್

ಜನ ಜಾಗೃತಿ

ನಂ. 10, ಶ್ರೀನಿಧಿ, ನಾಗರಭಾವಿ ಹಳ್ಳಿ ಮತ್ತು ಅಂಚೆ
ಬೆಂಗಳೂರು- 560 072

ಹಕ್ಕುಗಳು	:	ಕಿರಣ ಕಮಲ ಪ್ರಸಾದ
ಮುದ್ರಕರು	:	ಎಲಿಗೆಂಟ್ ಪ್ರಿಂಟಿಂಗ್ ವರ್ಕ್ಸ್ 74, ಸೌಂತ್ ಎಂಡ್ ರಸ್ತೆ ಬೆಂಗಳೂರು- 560 004 ದೂರವಾಣಿ : 6615507
ಪ್ರಕಾಶಕರು	:	ಜನಜಾಗೃತಿ ನಂ. 10, ಶ್ರೀನಿಧಿ ನಾಗರಭಾವಿ ಹಳ್ಳಿ ಮತ್ತು ಅಂಚೆ ಬೆಂಗಳೂರು- 560 072
ಸೂತ್ರದ ಚಿತ್ರಗಳು	:	ಚಿತ್ರಿಸಿದವರು : ಮಗಿಮೈ ಪ್ರಕಾಶಮ್
ಮುಖಚಿತ್ರ	:	ಕಿರಣ
ಮೊದಲಮುದ್ರಣ	:	ಜುಲೈ ೧೯೮೬ (1000 ಪ್ರತಿಗಳು)
ಎರಡನೇ ಮುದ್ರಣ	:	ಏಪ್ರಿಲ್ ೧೯೮೯ (2000 ಪ್ರತಿಗಳು)
ಮೂರನೇ ಮುದ್ರಣ	:	ಏಪ್ರಿಲ್ ೨೦೦೧ (2000 ಪ್ರತಿಗಳು)
ಬೆಲೆ	:	ರೂ. ೩೦.೦೦

ಒಳಗೆ ಏನಿದೆ?

ಏಕೆ ಈ ಪುಸ್ತಕ ?

ಈ ಪುಸ್ತಕ ಅರಿವಿನ ಜಾಗೃತಿ ಮತ್ತು ಸಾಕ್ಷರತೆ-ಭಾಗ ೧ಕ್ಕೆ ಪೂರಕವಾಗಿದೆ. ಅಲ್ಲಿಯ ತಾತ್ವಿಕ ಹಾಗೂ ಸೈದ್ಧಾಂತಿಕ ವಿಷಯಗಳನ್ನು ಕಾರ್ಯ ರೂಪಕ್ಕೆ ತರಲು ಅವಶ್ಯಕವಾದ ಸಂಗತಿಗಳನ್ನು ಇದು ಒಳಗೊಂಡಿರುತ್ತದೆ. ಮುಖ್ಯವಾಗಿ ಹಳ್ಳಿಯ ಸಮಸ್ಯೆಗಳನ್ನು ಕಣ್ಣಮುಂದೆ ತಂದು ನಿಲ್ಲಿಸಲು ಹಾಗೂ ಅವುಗಳ ಬಗ್ಗೆ ಚರ್ಚೆ ಮಾಡಲು ಪ್ರಚೋದನೆ ನೀಡಲು ಚಿತ್ರ ರೂಪದ ಸೂತ್ರಗಳು; ಸಮಸ್ಯೆಯ ಬಗ್ಗೆ ಆಳವಾದ ಚರ್ಚೆ ಹಾಗೂ ಅದನ್ನು ಹೋಗಲಾಡಿಸಲು ಯೋಗ್ಯ ಕಾರ್ಯ ಯೋಜನೆಯ ವ್ಯವಸ್ಥೆ ಇವೆಲ್ಲಾ ನಡೆದ ಮೇಲೆ ಅಕ್ಷರಜ್ಞಾನ ಪಡೆಯಲು ಸಹಾಯಕವಾಗುವಂತೆ ವಿವಿಧ ಅಕ್ಷರಪಟಗಳು; ಮತ್ತು ಇವೆಲ್ಲವನ್ನು ಯಾವ ರೀತಿಯಲ್ಲಿ ಬಳಸಬೇಕು ಎಂಬುದನ್ನು ವಿವರಿಸಲು ಪ್ರೇರಕನಿಗೆ ಅಗತ್ಯವಿದ್ದ ಸೂಚನೆಗಳು-ಇವು ಈ ಪುಸ್ತಕದ ವಿಷಯಗಳು. ಸೂತ್ರ ವಿವರಣೆ, ಸೂತ್ರಮಾಲೆ ಮತ್ತು ಅಕ್ಷರಜ್ಞಾನಕ್ಕೆ ಸಂಬಂಧಪಟ್ಟ ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ-೧ರಲ್ಲಿ ಬಂದ ವಿಷಯಗಳನ್ನು ಇದೇ ಪುಸ್ತಕದ ಕೊನೆಯಲ್ಲಿ ಕ್ರಮವಾಗಿ ಅನುಬಂಧ-೧, ಅನುಬಂಧ-೨ ಮತ್ತು ಅನುಬಂಧ-೩ರಲ್ಲಿ ಕೊಟ್ಟಿದೆ.

ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ-೨ರ ಇನ್ನೊಂದು ವೈಶಿಷ್ಟ್ಯವೇನೆಂದರೆ ಅಕ್ಷರ ಜ್ಞಾನದೊಡನೆ ಸಂಖ್ಯಾಜ್ಞಾನವನ್ನೂ ಸಮಸ್ಯೆಯನ್ನು ಮಂಡಿಸಿ ಕಲಿಯುವ ಶಿಕ್ಷಣ ಕ್ರಮವನ್ನೇ ಅನುಸರಿಸಿ ಪಡೆಯುವಂತೆ ಕೆಲವು ವಿಧಾನಗಳ ವಿವೇಚನೆ ಇಲ್ಲಿ ಮಾಡಿರುವುದು. ಪಾಲೂಲೋ ಫ್ರೇಇರೆಯು ತನ್ನ ಹೊಸ ಶಿಕ್ಷಣ ಕ್ರಮದಲ್ಲಿ ಸಂಖ್ಯಾಜ್ಞಾನದ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಆದರೂ ಸಂಖ್ಯಾಜ್ಞಾನ ಜೀವನದಲ್ಲಿ ಅವಶ್ಯವಾದ್ದರಿಂದ ಅಕ್ಷರಜ್ಞಾನದೊಡನೆ ಇದನ್ನೂ ಕಲಿಯುವ ಅವಕಾಶ ಕಲ್ಪಿಸಲಾಗಿದೆ. ಸಮಸ್ಯೆಯನ್ನು ಬಿಡಿಸುವ ಮುಖಾಂತರ ಸಂಖ್ಯಾಜ್ಞಾನವನ್ನು ಪಡೆಯುವಂತೆ ನೋಡಿಕೊಳ್ಳಲಾಗಿದೆ. ಕಲಿಯಲಿರುವ ವಿಷಯಗಳನ್ನು ಚಿತ್ರದ ಮೂಲಕ ಕಣ್ಣ ಮುಂದೆ ನಿಲ್ಲಿಸಿ ಹಾಗೂ ಪ್ರಶ್ನೆಗಳನ್ನು ಕೇಳುವ ಮುಖಾಂತರ ಶಿಕ್ಷಾರ್ಥಿಗಳೇ ಕಲಿಯುವ ವಿಷಯವನ್ನು ಕಂಡುಹಿಡಿದು ತಾವೇ 'ಸಮಸ್ಯೆ'ಯನ್ನು ಬಗೆಹರಿಸಿ ಅಂಕಿ ಸಂಖ್ಯೆಗಳನ್ನು ಕಲಿಯುವ ವಿಧಾನವನ್ನು ಮೊಟ್ಟ ಮೊದಲು ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ. ಸೈದ್ಧಾಂತಿಕವಾಗಿ ಗುರಿ ಸ್ಪಷ್ಟವಿದ್ದರೂ ಇದನ್ನು ಕಾರ್ಯರೂಪಕ್ಕೆ ತರುವ ರೀತಿ ಅಷ್ಟು ಸಮಂಜಸವಾಗಿ ತೋರದೇ ಇರಬಹುದು. ಆದರೆ ಇದು ಮೊದಲ ಪ್ರಯತ್ನ. ಅರ್ಥಪೂರ್ಣ ಕ್ರಮವನ್ನು ಕಂಡುಹಿಡಿಯುವುದಕ್ಕೆ ಇದು ನಾಂದಿಯಾಗಲಿ ಎಂದು ನನ್ನ ಅಭಿಲಾಷೆ.

ಜುಲೈ 1986 **ಯೇ. ಸ. ಕಿರಣ ಕಮಲ ಪ್ರಸಾದ**

ಜ್ಞಾನ ಜ್ಯೋತಿ, ಆನೇಕಲ್

ಎರಡನೇ ಆವೃತ್ತಿ

ಆನೇಕಲ್ ತಾಲೂಕು ಮಟ್ಟದಲ್ಲಿ ೧೯೮೯ರಂದು ನಡೆಸಿಕೊಂಡು ಹೋಗುತ್ತಿರುವ ಸಾಕ್ಷರತಾ ಆಂದೋಲನದ ಪ್ರಯುಕ್ತ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ಭಾಗ-೨ನ್ನು ಎರಡನೇ ಬಾರಿ ಮುದ್ರಿಸಲಾಗಿದೆ. ಸಾಕ್ಷರತಾ ಆಂದೋಲನಕ್ಕಾಗಿ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ವಿಧಾನವನ್ನೇ ಅನುಸರಿಸಲು ತಾಲೂಕಿನಲ್ಲಿ ಸಾಕ್ಷರತಾ ಆಂದೋಲನಾ ಕಾರ್ಯಕ್ರಮವನ್ನು ಕೈಗೆತ್ತಿಕ್ಕೊಂಡಿರುವ ವ್ಯಕ್ತಿ, ಸಂಘಗಳು ನಿರ್ಧರಿಸಿರುವುದರಿಂದ ಸಾಕ್ಷರತಾ ಚರ್ಚಾಕೂಟಗಳನ್ನು

ನಡೆಸಿಕೊಂಡು ಹೋಗಲು ಪ್ರೇರಕರಿಗೆ ಸಹಾಯವಾಗುವಂತೆ 'ಕೈಪಿಡಿ'ಯನ್ನು ಪರಿಷ್ಕರಿಸಿ ಮುದ್ರಿಸಲಾಗಿದೆ.

ಪರಿಷ್ಕೃತ ಆವೃತ್ತಿಯಲ್ಲಿ ಬದಲಾಯಿಸಿದ ಹಾಗೂ ಹೊಸದಾಗಿ ಸೇರಿಸಿದ ಅಂಶಗಳು ಹೀಗಿವೆ. ಮೋದಲ ಆವೃತ್ತಿಯ ಅನುಬಂಧಗಳಲ್ಲಿ ಕೊಡಲಾಗಿದ್ದ ವಿಷಯಗಳನ್ನು ಸೂತ್ರಗಳ ಮೊದಲೇ ಕೊಡಲಾಗಿದೆ. ಅರಿವಿನ ಜಾಗೃತಿ ಬಗ್ಗೆ ಚುಟುಕಾದ ಪೀಠಿಕೆಯನ್ನು ಕೊಟ್ಟು 'ಕೈಪಿಡಿ'ಯು ಒಂದು ಸ್ವಯಂಪೂರ್ಣ ಪುಸ್ತಕವೆಂಬ ರೀತಿಯಲ್ಲಿ ಹೊರತರಲಾಗಿದೆ. ಪರಿಷ್ಕೃತ ಆವೃತ್ತಿಯ ಸೂತ್ರಗಳಲ್ಲಿ ಏನೂ ಬದಲಾವಣೆ ಇಲ್ಲದಿದ್ದರೂ ಸೂತ್ರಗಳ ಹಿಂದೆ ಬರುವ 'ಪ್ರೇರಕನ ಸೂಚನೆಕಗಳು' ಇವುಗಳನ್ನು ಪರಿಷ್ಕರಿಸಲಾಗಿದೆ. ಅಕ್ಷರ ಪಟಗಳ ವಿನ್ಯಾಸದಲ್ಲೂ ಕ್ರಮದಲ್ಲೂ ಕೆಲವೆಡೆ ಬದಲಾವಣೆ ಇದೆ.

ಪರಿಷ್ಕೃತ ಆವೃತ್ತಿಯಲ್ಲಿ ಹೊಸದಾಗಿ ಎರಡು ಅಂಶಗಳು ಬಂದಿವೆ. ವಯಸ್ಕರು ಅಕ್ಷರಾಭ್ಯಾಸಕ್ಕೆ ತೊಡಗುವ ಮುಂಚೆ ತಮ್ಮ ಕೈ ಬೆರಳುಗಳನ್ನು ರೂಢಿಸಿಕೊಂಡು 'ಕೈ ಸಾಧನೆ'ಯ ಬಗ್ಗೆ ಮಾಹಿತಿ ನೀಡಿ ಕೈ ಸಾಧನೆಯ ಬಗ್ಗೆ ಅಭ್ಯಾಸಗಳನ್ನು ಸೂಚಿಸಿರುವುದು ಮೊದಲ ಅಂಶವಾದರೆ, ಅರಿವಿನ ಜಾಗೃತಿ ಮತ್ತು ಸಾಕ್ಷರತೆ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗಲು ೬೦ ದಿನಗಳ ಒಂದು ಮಾದರಿ ವೇಳಾಪಟ್ಟಿಯನ್ನು ರಚಿಸಿರುವುದು ಎರಡನೆಯದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ಕಾರ್ಯಕ್ರಮವನ್ನು ನಡೆಸಿಕೊಂಡುಹೊಗಲು ಅದು ಒಂದು ಮಾರ್ಗದರ್ಶಿ ಮಾತ್ರ.

ಪರಿಷ್ಕೃತ ಆವೃತ್ತಿಯನ್ನು ಮುದ್ರಿಸಿದ ಆಲ್ಫಾ ಪ್ರಿಂಟರ್ಸ್‌ರವರಿಗೆ ಕೃತಜ್ಞತೆಗಳು.

14 ಏಪ್ರಿಲ್, 1989 — ವಿ. ಬ. ಕಿರಣ ಕಮಲ ಪ್ರಸಾದ

ಜನಜಾಗೃತಿ

ಗುಡ್ಡಹಟ್ಟಿ, ಆನೇಕಲ್

ಮೂರನೇ ಪರಿಷ್ಕೃತ ಆವೃತ್ತಿ

ಕೋಲಾರ, ಮಾಲೂರು, ಶಿಡ್ಲಘಟ್ಟ ಮತ್ತು ಮದ್ದೂರು ತಾಲೂಕುಗಳಲ್ಲಿ ಜೀವಿಕವು ಅಜಿಂ ಪ್ರೇಮ್‌ಜಿ ಪ್ರತಿಷ್ಠಾನ ಮತ್ತು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಅಕ್ಟೋಬರ್ ೨೦೦೦ ದಿಂದ ಎತ್ತಿಕೊಂಡ ಗುಣಾತ್ಮಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ -UNIQUE ಯೋಜನೆಯಲ್ಲಿ ಹಮ್ಮಿಕ್ಕೊಂಡ ಬಾಲಕಾರ್ಮಿಕರ ಸೇತುಶಿಕ್ಷಣಕ್ಕೆ ಅರಿವಿನ ಜಾಗೃತಿಯ ಕ್ರಮವನ್ನೇ ಅನುಸರಿಸಲು ನಿರ್ಧರಿಸಲಾಗಿದೆ. ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ಭಾಗ ೧ರ ಮೂರನೇ ಆವೃತ್ತಿಯಲ್ಲಿ ಹಲವಾರು ಬದಲಾವಣೆಗಳನ್ನು ತರಲಾಗಿದೆ. ಅದೇ ರೀತಿ ಭಾಗ ೨ರಲ್ಲೂ ಕೆಲವು ಮಾರ್ಪಾಡುಗಳನ್ನು ತರಲಾಗಿದೆ. ಜೀವಿಕವು ಆನೇಕಲ್ ತಾಲೂಕಿನಲ್ಲಿ ನಡೆಸುತ್ತಿರುವ ಬಾಲಕಾರ್ಮಿಕರ ಮರುಶಾಲಾ ಯೋಜನೆಯ ಸೇತುಶಿಕ್ಷಣದ ಅನುಭವದ ಲಾಭ ಪಡೆದು ಆ ಬದಲಾವಣೆಗಳನ್ನು ತರಲಾಗಿದೆ. ಆ ಬದಲಾವಣೆಗಳು ಹೀಗಿವೆ:

೧. ಭಾಗ ೧ರ ಮೂರನೇ ಆವೃತ್ತಿಯಲ್ಲಿ ಸೂತ್ರಮಾಲೆಯಲ್ಲಿಯ ಸಮಸ್ಯೆಗಳ ಅನುಕ್ರಮದ ಬದಲಾವಣೆಯನ್ನಾಧರಿಸಿ ಪ್ರತಿ ಸೂತ್ರ (ಸಮಸ್ಯೆ) ಕುರಿತು ನೀಡಲಾಗಿರುವ ಪ್ರೇರಕರಿಗೆ ಸೂಚನೆಗಳಲ್ಲಿಯೂ ಸೂಕ್ತ ಬದಲಾವಣೆ ಮಾಡಲಾಗಿದೆ.

೨. ಸೂತ್ರದ ಚಿತ್ರವನ್ನು ಚಿಕ್ಕದಾಗಿಸಿ ಪ್ರೇರಕರಿಗೆ ಸೂಚನೆಗಳಲ್ಲಿ ಕೊಡಲಾಗಿದ್ದು, ಶಿಕ್ಷಾರ್ಥಿಗಳ ಗುಂಪುಗಳಿಗೆ ಬಳಸಲು ಸುಲಭವಾಗುವಂತೆ ಚಿತ್ರಗಳನ್ನು ದೊಡ್ಡ ಆಕಾರದಲ್ಲಿ ಪ್ರತ್ಯೇಕವಾಗಿ ಮುದ್ರಿಸಲಾಗುವುದು. ಚಿತ್ರದೊಳಗಡೆ ಕೊಟ್ಟಿರುವ ಸಮಸ್ಯೆಯ ಶಬ್ದವನ್ನು ತೆಗೆಯಲಾಗಿದೆ.

೩. ಅಕ್ಷರ ಜ್ಞಾನಕ್ಕೆ ಮತ್ತು ಶಬ್ದರಚನೆಗೆ ಬಳಸಲಾಗುವ ಅಕ್ಷರಪಟಗಳನ್ನು ಪ್ರೇರಕರ ಕೈಪಿಡಿಯಿಂದ ಕೈಬಿಟ್ಟಿದ್ದು ಅವನ್ನೂ ದೊಡ್ಡ ಆಕಾರದಲ್ಲಿ ಪ್ರತ್ಯೇಕವಾಗಿ ಮುದ್ರಿಸಲಾಗುವುದು.

೪. ಶಬ್ದರಚನೆಗೆ ಎಲ್ಲಾ ಅಕ್ಷರಗಳ ಕಾಗುಣಿತಗಳನ್ನೊಳಗೊಂಡ ಒಂದೇ ಅಕ್ಷರಪಟವನ್ನು ದೊಡ್ಡ ಆಕಾರದಲ್ಲಿ ಒದಗಿಸಲಾಗುವುದು. ಯಾವುದೇ ಸಮಸ್ಯೆಯ ಶಬ್ದದ ಅಕ್ಷರಗಳನ್ನು ಜೋಡಿಸಿ ಪದಮಾಡುವಾಗ ಅಷ್ಟರ ವರೆಗೆ ಕಲಿಯದಿರುವ ಅಕ್ಷರಗಳ ಕಾಗುಣಿತಗಳನ್ನು ಶಬ್ದರಚನೆಯ ಸಮಯದಲ್ಲಿ ಮುಚ್ಚಬೇಕಾಗುವುದು.

೫. ಮೊದಲ ೧೦ ಸೂತ್ರಗಳಲ್ಲಿ ಬರುವ ಗಣಿತಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ಕೈಬಿಡಲಾಗಿದೆ. ಅವನ್ನು ಪ್ರತ್ಯೇಕವಾಗಿ ಕೊಡಲಾಗುವುದು.

ಈ ಬದಲಾವಣೆಗಳಿಂದ ಒಂದು ಬಹುಮುಖ್ಯ ಪ್ರಯೋಜನವೇನೆಂದರೆ ಒಂದು ವೇಳೆ ಯಾವುದೇ ಶಿಕ್ಷಾರ್ಥಿಗಳ ಗುಂಪಿಗೆ ತಕ್ಕಂತೆ ಸೂತ್ರಮಾಲೆಯಲ್ಲಿಯ ಸಮಸ್ಯೆಗಳಲ್ಲಿ ಬದಲಾವಣೆ ತರಬೇಕಾದಲ್ಲಿ ಆ ತರಹ ಮಾಡಲು ಪೂರ್ತಿ ಸ್ವಾತಂತ್ರ್ಯ ಮತ್ತು ಅವಕಾಶ ಈ ಕೈಪಿಡಿಯು ಒದಗಿಸಿಕೊಡುತ್ತದೆ. ಇಲ್ಲಿಯ ಸಮಸ್ಯೆಗಳನ್ನು ಬಿಟ್ಟು ಬೇರೆ ಸಮಸ್ಯೆಗಳನ್ನು ಸೇರಿಸಬಹುದು. ಅದಕ್ಕೆ ತಕ್ಕಂತೆ ಸೂತ್ರಗಳನ್ನೂ ಅಕ್ಷರ ಪಟಗಳನ್ನೂ ಬದಲಾಯಿಸಿ ಬಳಸಬಹುದು.

೬. ಮಾದರಿ ವೇಳಾಪಟ್ಟಿಯನ್ನು ಇಡೀ ದಿವಸಕ್ಕೆ ಅನ್ವಯಿಸುವಂತೆ ಎರಡು ತಿಂಗಳ ತನಕ ರೂಪಿಸಲಾಗಿದೆ. ಅರ್ಧ ಅರ್ಧ ಘಂಟೆಯ ದಿವಸಕ್ಕೆ ಎಂಟು ಅವಧಿಗಳಂತೆ ಚಟುವಟಿಕೆಗಳನ್ನು ವಿವರಿಸಲಾಗಿದೆ. ಇದನ್ನು ಬಾಲಕಾರ್ಮಿಕರಿಗೆ ನಡೆಸುವ ಸೇತುಶಿಕ್ಷಣಕ್ಕೆ ಅನ್ವಯಿಸುವಂತೆ ಮಾಡಲಾಗಿದೆ.

೭. ಎರಡನೇ ಆವೃತ್ತಿಯಲ್ಲಿ ಒಂದರಿಂದ ಹತ್ತು ಪುಟಗಳಲ್ಲಿ ಒದಗಿಸಲಾಗಿದ್ದ ಅರಿವಿನ ಜಾಗೃತಿ ಮತ್ತು ಸಾಕ್ಷರತೆ- ಕಿರುಪರಿಚಯ; ಸೂತ್ರವಿವರಣೆ; ಸೂತ್ರಮಾಲೆ; ಅಕ್ಷರಜ್ಞಾನದ ವಿವಿಧ ಹಂತಗಳು ಇವನ್ನು ಕೈಬಿಡಲಾಗಿದೆ. ಇವುಗಳಿಗೋಸ್ಕರ ಭಾಗ ೧ನ್ನೇ ಬಳಸಬೇಕಾಗುತ್ತದೆ.

೮. ಬಾಲಕಾರ್ಮಿಕರ ಸೇತುಶಿಕ್ಷಣಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಹಂತಗಳಲ್ಲಿ ಅಕ್ಷರ ಜ್ಞಾನದ ಮತ್ತು ಗಣಿತದ ಸ್ವಾರಸ್ಯಕರ ಕಲಿಕೆಗೆ ಮತ್ತು ಕಲಿಕೆಯ ದೃಢೀಕರಣಕ್ಕೆ ಹಾಗೂ ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ಚಟುವಟಿಕೆಗಳನ್ನು ಪ್ರತಿಸಮಸ್ಯೆಯಲ್ಲಿ ಸೇರಿಸಿದೆ. ಈ ಚಟುವಟಿಕೆಗಳನ್ನು ಸಿದ್ಧಪಡಿಸಿದ ಡಿ. ವೆಂಕಟೇಶ್, ದೊಡ್ಡಮಾಲೂರು, ಮಧುಗಿರಿ ಮತ್ತು ಕೆ. ಟಿ. ನಾಗೇಶ್, ಕೆ. ಬಿ. ದೊಡ್ಡಿ, ಮದ್ದೂರು ಅವರಿಗೆ ನಾನು ಆಭಾರಿಯಾಗಿದ್ದೇನೆ. ಬೇರೆ ಬೇರೆ ಮೂಲಗಳಿಂದ ಈ ಚಟುವಟಿಕೆಗಳನ್ನು ಅವರು ಉದ್ಧರಿಸಿದ್ದಾರೆ.

೯. ಬಾಲಕಾರ್ಮಿಕರಿಗೆ ನಡೆಸುವ ಸೇತುಶಿಕ್ಷಣ ಶಿಬಿರದ ಬಗ್ಗೆ ಪ್ರೇರಕರಿಗೆ ಕೆಲವು ಮಾರ್ಗಸೂಚಿಗಳನ್ನು ಕೊಡಲಾಗಿದೆ.

ಈ ಆವೃತ್ತಿಯನ್ನು ಅಂದವಾಗಿ ಮುದ್ರಿಸಿದ ಎಲಿಗೆಂಟ್ ಪ್ರಿಂಟಿಂಗ್ ವರ್ಕ್ಸ್ ಅವರಿಗೆ ನನ್ನ ಧನ್ಯವಾದಗಳು.

ಏಪ್ರಿಲ್ ೧೪, ೨೦೦೦ **ಕಿರಣ ಕಮಲ ಪ್ರಸಾದ**
ಬೆಂಗಳೂರು

ಎರಡುವರೆ ತಿಂಗಳ ಮಾದರಿ ವೇಳಾಪಟ್ಟಿ

ವಾರ	ದಿನ	ಅವಧಿ (½ ಘಂಟೆ)	ಚಟುವಟಿಕೆ
I	1-6	1-48	ಆಟಗಳು, ಹಾಡುಗಳು, ಕಥೆಗಳು, ಒಗಟುಗಳು, ಗಾದೆಗಳು, ನಾಟಕಗಳು, ಚಿತ್ರಗಳು, ಮಣ್ಣಲ್ಲಿ ಆಕೃತಿಗಳು, ಪೇಪರಿನಲ್ಲಿ ಆಕೃತಿಗಳು....
II	1	1-2	ಜಗಳ: ಚರ್ಚೆ; ಕೊನೇ ೫ ನಿಮಿಷ ಜಗಳ ಶಬ್ದ ಗ್ರಹಿಕೆ
		3-4	ಜ-ಗ-ಳ ಅಕ್ಷರಗಳ ಗ್ರಹಿಕೆ; ಕೈಸಾಧನೆಯ ಅಭ್ಯಾಸಗಳು; ಜ ಅಕ್ಷರ ಬರೆಯುವುದು
		5-8	'ಜ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
	2	1-4	ಗ ಮತ್ತು ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
		5-8	ಳ ಮತ್ತು ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
	3	1-2	ಪುನರಾವರ್ತನೆ; 'ಅ' ಅಕ್ಷರ ಗ್ರಹಿಕೆ ಮತ್ತು ಬರೆ
		3-4	ಆ, ಇ, ಈ: ಗ್ರಹಿಕೆ ಮತ್ತು ಬರೆ
		5-6	ಉ, ಊ, ಋ, ಎ, ಏ, ಐ: ಗ್ರಹಿಕೆ ಮತ್ತು ಬರೆ
		7-8	ಒ, ಓ, ಔ, ಅಂ, ಅಃ : ಗ್ರಹಿಕೆ ಮತ್ತು ಬರೆ
	4	1-2	ಪುನರಾವರ್ತನೆ, ಅಭ್ಯಾಸ
		3-7	ಹೊಸ ಪದಗಳನ್ನು ರೂಪಿಸುವುದು; ಬರೆಯುವುದು (ವಾಕ್ಯರಚನೆ)
		8	ಅಂಕಿ '1'ರ ಗ್ರಹಿಕೆ ಮತ್ತು ಬರೆ, ಮೌಲ್ಯಮಾಪನ
	5	1-2	ಕೂಲಿ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಕೂ ಅಕ್ಷರ ಮತ್ತು 'ಕ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
	6	1-4	ಲಿ ಅಕ್ಷರ ಮತ್ತು 'ಲ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
		5-7	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		8	ಅಂಕಿ '2' : ಗ್ರಹಿಕೆ; ಬರೆ; ಕೂಡಿಸು(+), ಕಳೆ(–) ಕಲ್ಪನೆಗಳು; 0: ಗ್ರಹಿಕೆ; ಬರೆ; ಮೌಲ್ಯಮಾಪನ
III	1	1-2	ಆಹಾರ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಹಾ ಅಕ್ಷರ ಮತ್ತು ಹದ ಕಾಗುಣಿತಗಳು: ಗ್ರಹಿಕೆ, ಬರೆ
	2	1-4	ರ ಅಕ್ಷರ ಮತ್ತು ರದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
		5-7	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		8	ಅಂಕಿ '3' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ

ವಾರ	ದಿನ	ಅವಧಿ (½ ಘಂಟೆ)	ಚಟುವಟಿಕೆ
III	3	1-2	ಸಾಲ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಸಾ ಅಕ್ಷರ ಮತ್ತು ಸದ ಕಾಗುಣಿತಗಳು: ಗ್ರಹಿಕೆ, ಬರೆ
	4	1-6	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		7-8	ಅಂಕಿ '4' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ
	5	1-2	ಹರಿಕಥೆ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಥೆ ಅಕ್ಷರ ಮತ್ತು ಥದ ಕಾಗುಣಿತಗಳು: ಗ್ರಹಿಕೆ, ಬರೆ
	6	1-6	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		7-8	ಅಂಕಿ '5' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ
IV	1	1-2	ದೇವಸ್ಥಾನ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ದೇ ಅಕ್ಷರ ಮತ್ತು 'ದ'ದ ಕಾಗುಣಿತಗಳು: ಗ್ರಹಿಕೆ, ಬರೆ
	2	1-4	ವ ಅಕ್ಷರ ಮತ್ತು 'ವ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
		5-8	ನ ಅಕ್ಷರ ಮತ್ತು 'ನ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
	3	1-2	ತಲೆಕಟ್ಟು ತೆಗೆದು ಬರೆಯುವ ಒತ್ತಕ್ಷರಗಳು
		3-7	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		8	ಅಂಕಿ '6' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ
	4	1-2	ಮಹಿಳೆ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಮ ಅಕ್ಷರ ಮತ್ತು 'ಮ'ದ ಕಾಗುಣಿತಗಳು: ಗ್ರಹಿಕೆ, ಬರೆ
	5	1-6	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		7-8	ಅಂಕಿ '7' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ
	6	1-2	ಭೂಮಿ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಭೂ ಅಕ್ಷರ ಮತ್ತು 'ಭ'ದ ಕಾಗುಣಿತಗಳು: ಗ್ರಹಿಕೆ, ಬರೆ
V	1	1-6	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ
		7-8	ಅಂಕಿ '8' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು
	2	1-2	ಜೀತ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ತ ಅಕ್ಷರ ಮತ್ತು 'ತ'ದ ಕಾಗುಣಿತಗಳು: ಗ್ರಹಿಕೆ, ಬರೆ
	3	1-6	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ

ವಾರ	ದಿನ	ಅವಧಿ (½ ಘಂಟೆ)	ಚಟುವಟಿಕೆ
V		7-8	ಅಂಕಿ '9' : ಗ್ರಹಿಕೆ; ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ
	4	1-2	ಪ್ರಯಾಣ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಪ ಅಕ್ಷರ ಮತ್ತು 'ಪ'ದ ಕಾಗುಣಿತಗಳು: ಗ್ರಹಿಕೆ, ಬರೆ
	5	1-4	ಯಾ ಅಕ್ಷರ ಮತ್ತು 'ಯ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
		5-8	ಣ ಅಕ್ಷರ ಮತ್ತು 'ಣ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
	6	1-2	ಮೂಲಾಕ್ಷರದಿಂದ ಪೂರ್ತಿ ಬದಲಾಗುವ ಒತ್ತಕ್ಷರಗಳು
		3-7	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
		8	ಸಂಖ್ಯೆ '10' : ಗ್ರಹಿಕೆ; ಬರೆ; ಅಂಕಿಗಳ ಸಂಯೋಜನೆಯಿಂದ ಸಂಖ್ಯೆಗಳನ್ನು ಬರೆಯುವ ರೀತಿ; ಕೂಡಿಸುವ, ಕಳೆಯುವ ಲೆಕ್ಕಗಳು ಮೌಲ್ಯಮಾಪನ
VI	1	1-2	ಚಟ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಚ ಅಕ್ಷರ ಮತ್ತು 'ಚ'ದ ಕಾಗುಣಿತಗಳು: ಗ್ರಹಿಕೆ, ಬರೆ
	2	1-4	ಟ ಅಕ್ಷರ ಮತ್ತು 'ಟ'ದ ಕಾಗುಣಿತಗಳು: ಗ್ರಹಿಕೆ ಮತ್ತು ಬರೆ
		5-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
	3	1-8	ಸಂಖ್ಯೆ 11 ರಿಂದ 99: ಗ್ರಹಿಕೆ, ಬರೆ; ಸ್ಥಾನಬೆಲೆ - ಬಲದಿಂದ ಎಡಕ್ಕೆ 1ನೇ ಸ್ಥಾನ = ಬಿಡಿ; 2ನೇ ಸ್ಥಾನ = ಹತ್ತು (ದಶ) ಮೌಲ್ಯಮಾಪನ
VI	4	1-2	ಕಾಡು: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಡು ಅಕ್ಷರ ಮತ್ತು 'ಡ'ದ ಕಾಗುಣಿತಗಳು: ಗ್ರಹಿಕೆ, ಬರೆ
	5	1-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
	6	1-8	ಸಂಖ್ಯೆ 100 : ಗ್ರಹಿಕೆ, ಬರೆ; ನೂರರ ಸ್ಥಾನ; 100 ರಿಂದ 999 ಸಂಖ್ಯೆಗಳ ಗ್ರಹಿಕೆ, ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು; ಮೌಲ್ಯಮಾಪನ
VII	1	1-2	ಶುಚಿತ್ವ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-8	ಶು ಅಕ್ಷರ ಮತ್ತು 'ಶ'ದ ಕಾಗುಣಿತಗಳು: ಗ್ರಹಿಕೆ, ಬರೆ
	2	1-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
	3	1-8	ಸಂಖ್ಯೆಗಳು : ಸಾವಿರ, ದಶಸಾವಿರ, ಲಕ್ಷ ದಶಲಕ್ಷ, ಕೋಟಿ: ಗ್ರಹಿಕೆ, ಬರೆ; ಕೂಡಿಸುವ, ಕಳೆಯುವ ಲೆಕ್ಕಗಳು; ಮೌಲ್ಯಮಾಪನ
	4	1-2	ಔಷಧಿ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-4	ಷ ಅಕ್ಷರ ಮತ್ತು 'ಷ'ದ ಕಾಗುಣಿತಗಳು: ಗ್ರಹಿಕೆ, ಬರೆ


ವಾರ	ದಿನ	ಅವಧಿ (½ ಘಂಟೆ)	ಚಟುವಟಿಕೆ
VII		5-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
	5	1-8	ಗುಣಾಕಾರದ ಗ್ರಹಿಕೆ, ಮಗ್ಗಿಗಳು
	6	1-8	ಗುಣಾಕಾರದ ಗ್ರಹಿಕೆ, ಮಗ್ಗಿಗಳು; ಮೌಲ್ಯಮಾಪನ
VIII	1	1-2	ಮೂಢನಂಬಿಕೆ: ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-4	ಢ ಅಕ್ಷರ ಮತ್ತು 'ಢ'ದ ಕಾಗುಣಿತಗಳು: ಗ್ರಹಿಕೆ, ಬರೆ
		5-6	ಮಹಾಪ್ರಾಣಗಳು
		7-8	ಖ ಮತ್ತು 'ಖ'ದ ಕಾಗುಣಿತಗಳು
	2	1-4	ಫ ಮತ್ತು 'ಫ'ದ ಕಾಗುಣಿತಗಳು
		5-8	ಛ ಮತ್ತು 'ಛ'ದ ಕಾಗುಣಿತಗಳು
	3	1-4	ಝ ಮತ್ತು 'ಝ'ದ ಕಾಗುಣಿತಗಳು
		5-8	ಠ ಮತ್ತು 'ಠ'ದ ಕಾಗುಣಿತಗಳು
	4	1-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
	5	1-8	ಭಾಗಾಹಾರ; ಮೌಲ್ಯಮಾಪನ
	6	1-2	ಜ್ಞಾನ : ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3	ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರಗಳು
		4	'ಞ' ಮತ್ತು 'ಙ' ಅಕ್ಷರಗಳ ಗ್ರಹಿಕೆ
		5-8	ಎಲ್ಲಾ ವ್ಯಂಜನಗಳ ಒತ್ತಕ್ಷರಗಳ ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಅಭ್ಯಾಸ
IX	1	1-8	ಭಿನ್ನರಾಶಿ, ಶೇಕಡಾ, ದಶಮಾಂಶ
	2	1-8	ಭಿನ್ನರಾಶಿ, ಶೇಕಡಾ, ದಶಮಾಂಶ; ಮೌಲ್ಯಮಾಪನ
	3	1-2	ಐಶ್ವರ್ಯ : ಚರ್ಚೆ; ಕೊನೆ ೫ ನಿಮಿಷ ಶಬ್ದ ಗ್ರಹಿಕೆ
		3-4	ಅರ್ಕಚಿಹ್ನೆ ಗ್ರಹಿಕೆ, ಬರೆ
		5-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ
	4	1-8	ಕಾಲ, ದೂರ, ಗಾತ್ರ, ತೂಕ, ಕುರಿತು ಅಳತೆಗಳು
	5	1-8	ಕಾಲ, ದೂರ, ಗಾತ್ರ, ತೂಕ, ಕುರಿತು ಅಳತೆಗಳು
	6	1-8	ಪುನರಾವರ್ತನೆ; ಶಬ್ದ ರಚನೆ; ವಾಕ್ಯರಚನೆ; ಮೌಲ್ಯಮಾಪನ
X	1-6	1-48	ಪುನರಾವರ್ತನೆಯ ಚಟುವಟಿಕೆಗಳು; ಓದುವಿಕೆಗೆ ಚಟುವಟಿಕೆಗಳು; ಬರೆಯುವಿಕೆಗೆ ಚಟುವಟಿಕೆಗಳು; ವ್ಯವಹಾರದ ಗಣಿತಕ್ಕೆ ಚಟುವಟಿಕೆಗಳು; ಮೌಲ್ಯ ಮಾಪನಕ್ಕೆ ಚಟುವಟಿಕೆಗಳು.

ಕೈ ಸಾಧನೆ

ವಯಸ್ಕರಿಗೆ ಅಥವಾ ಬಾಲಕಾರ್ಮಿಕರಿಗೆ ಓದು ಬರಹ ಕಲಿಸುವಾಗ ಗಮನದಲ್ಲಿಡಬೇಕಾದ ಒಂದು ಮುಖ್ಯ ಸಂಗತಿ ಅಂದರೆ, ಅವರಿಗೆ ಓದಲು ಸುಲಭವಾಗಿ ಬಂದರೆ ಬರೆಯಲು ಅಷ್ಟು ಸುಲಭವಾಗಿ ಬರುವುದಿಲ್ಲ. ಬರವಣಿಗೆಗೆ ಕೈ ಬೆರಳುಗಳು ಸಲೀಸಾಗಿ ಕೂಡುವುದಿಲ್ಲ, ಎಳೆಯಲ್ಪಡುವುದಿಲ್ಲ. ಇದು ಕೇವಲ ಅನಕ್ಷರಸ್ಥರ ಸಮಸ್ಯೆ ಅಲ್ಲ. ಯಾವುದೇ ವ್ಯಕ್ತಿ ಚಿಕ್ಕಂದಿನಲ್ಲಿ ಯಾವುದೇ ಒಂದು ಕಾರ್ಯಕ್ಕೆ ತನ್ನ ಕೈಬೆರಳುಗಳನ್ನು ರೂಢಿಸಿಕೊಳ್ಳದಿದ್ದರೆ, ವಯಸ್ಸಾದ ಮೇಲೆ ರೂಢಿಸಿಕೊಳ್ಳಲು ಹೆಚ್ಚು ಶ್ರಮ ಪಡಬೇಕಾಗುತ್ತದೆ. ಶ್ರಮಪಟ್ಟರೂ ಕೈ ಬೆರಳುಗಳ ಹೊಂದಾಣಿಕೆ ತನ್ನಿಂದ ತಾನೇ ಬರುವುದಿಲ್ಲ. ಆದ್ದರಿಂದ ವಯಸ್ಕ ಅನಕ್ಷರಸ್ಥರು ಬರವಣಿಗೆ ಕಲಿಯುವಾಗ ಅವರಲ್ಲಿ ಆದಷ್ಟು ತಾಳ್ಮೆಯಿಂದ ವರ್ತಿಸತಕ್ಕದ್ದು. ಒಂದು ಅಕ್ಷರದ ರೂಪವನ್ನು ಸುಲಭವಾಗಿ ಗ್ರಹಿಸಲು ಆ ಅಕ್ಷರಕ್ಕೆ ಸಾದೃಶವಾಗಿರುವ ಒಂದು ವಸ್ತುವನ್ನು ಹೇಳಿ (ಉದಾ: 'ರ'ಗೆ ರಾಗಿ ಮುದ್ದೆ, 'ಗ'ಕ್ಕೆ ಗಂಟೆ ಇತ್ಯಾದಿ) ಬರೆಸಲಿಕ್ಕೆ ತೊಡಗ ಬಹುದು.

ಇದಕ್ಕೂ ಮುಖ್ಯವಾಗಿ ಕೈ ಸಾಧನೆಗೆ ಕೆಲವು ಅಭ್ಯಾಸಗಳನ್ನು ವಯಸ್ಕರು ಅಥವಾ ಬಾಲಕಾರ್ಮಿಕರು ಆಗಿಂದಾಗ್ಗೆ ಮಾಡಿದರೆ ಒಳಿತು. ಮೊದಲ ಸಮಸ್ಯೆಯ ಚರ್ಚೆಯಾದ ನಂತರ ಚರ್ಚೆ ನಡೆಸಿದ ಶಬ್ದ ರೂಪವನ್ನು ಗ್ರಹಿಸಿ ಆದ ಮೇಲೆ ಆ ಶಬ್ದದ ಮೊದಲ ಅಕ್ಷರವನ್ನು ಬರೆಯಲ್ಲಿಕ್ಕೆ ಕಲಿಯುವ ಮೊದಲು ಕೈ ಸಾಧನೆಯ ಅಭ್ಯಾಸಗಳನ್ನು ಸಾಕಷ್ಟು ಸಮಯಮಾಡಿ 'ಬರೆಯುವ ಕೈಬೆರಳುಗಳು ಸುಲಭವಾಗಿ ಕೂಡುತ್ತವೆ, ಸುಲಭವಾಗಿ ಬಳಪವನ್ನು ಹಿಡಿಯುತ್ತವೆ ಮತ್ತು ಅನಾಯಾಸವಾಗಿ ಬೇರೆ ಬೇರೆ ರೀತಿಯ ಗೆರೆಗಳನ್ನು ಎಳೆಯುತ್ತವೆ' ಎಂದು ಖಚಿತವಾದ ಮೇಲೆ ಮೊದಲ ಸಮಸ್ಯೆಯ ಮೊದಲ ಅಕ್ಷರವನ್ನು ಬರೆಯಲು ಕಲಿಯಲಿಕ್ಕೆ ಶುರು ಮಾಡಬಹುದು. ನಂತರದ ದಿನಗಳಲ್ಲಿ ಕೆಲವು ನಿಮಿಷ ಈ ಅಭ್ಯಾಸಗಳನ್ನು ಮುಂದುವರಿಸಬಹುದು. ಮುಂದೆ ಕೊಟ್ಟ ಮಾದರಿಯಂತೆ ಕೈ ಸಾಧನೆಯ ಅಭ್ಯಾಸಗಳನ್ನು ಮಾಡಬಹುದು.

ಕೈ ಸಾಧನೆಯ ಅಭ್ಯಾಸಗಳು



ಸೇತು ಶಿಕ್ಷಣ ಶಿಬಿರಕ್ಕೆ ಮಾರ್ಗದರ್ಶನಗಳು

1. ಗುರಿಗಳು

1) 8-14 ವರ್ಷದ ಶಾಲೆಗೆ ಹೋಗದ ಮಕ್ಕಳನ್ನು ಗುರ್ತಿಸಿ ಅವರಿಗೆ ಕಲಿಕೆಯಲ್ಲಿ ಆಸಕ್ತಿಯನ್ನು ಹೆಚ್ಚಿಸುವುದು.

2) ಸಾಂಪ್ರದಾಯಿಕವಲ್ಲದ ಭೋಧನೆಯ ವಿಧಾನಗಳನ್ನು ಅನುಸರಿಸಿ ಆಸಕ್ತಿದಾಯಕವಾದ ಆಟ, ಹಾಡು, ಕಥೆ ಮತ್ತು ಚಟುವಟಿಕೆಗಳ ಮೂಲಕ ಮಕ್ಕಳಿಗೆ ಭೋಧಿಸುವುದು.

3) ಅರಿವಿನ ಜಾಗೃತಿ ಪುಸ್ತಕವನ್ನು ಬಳಸಿಕೊಂಡು ಅಕ್ಷರಾಭ್ಯಾಸ ಮಾಡಿಸುವುದು, ಗಣಿತ ಜ್ಞಾನ ಬರುವಂತೆ ನೋಡುವುದು.

4) ಶಿಬಿರಕ್ಕೆ ಬಂದ ಮಕ್ಕಳನ್ನು ಅವರು ಗಳಿಸಿದ ಸಾಮರ್ಥ್ಯದ ಆಧಾರದ ಮೇಲೆ 5ನೇ ಕ್ಲಾಸಿಗೆ ಮೇಲ್ಪಟ್ಟ ತರಗತಿಗೆ ಒಂದು ಶಾಲೆಯಲ್ಲಿ ಸೇರಿಸುವುದು.

2. ನಿರ್ವಹಣೆ

ಸೇತು ಶಿಕ್ಷಣ ಶಿಬಿರವು ಆಟ, ಹಾಡು, ಮಾತು ಮತ್ತು ಚಟುವಟಿಕೆಗಳಿಂದ ಕೂಡಿರುತ್ತದೆ. ಈ ಕಾರ್ಯಕ್ರಮವು ಎರಡುವರೆ ತಿಂಗಳಲ್ಲಿ ನಡೆಯುತ್ತದೆ. ಎರಡುವರೆ ತಿಂಗಳನ್ನು ಮೂರು ಹಂತಗಳನ್ನಾಗಿ ವಿಂಗಡಿಸಲಾಗುವುದು.

1) ಪೂರ್ವ ಸಿದ್ಧತೆಯ ಮೊದಲ ವಾರ

2) ಅರಿವಿನ ಜಾಗೃತಿಯ ಕಾರ್ಯಕ್ರಮಕ್ಕೆ ೮ ವಾರಗಳು

3) ಕಲಿಕೆಯ ದೃಢೀಕರಣದ ಮತ್ತು ಮೌಲ್ಯಮಾಪನದ ಕೊನೇ ವಾರ.

1) ಪೂರ್ವ ಸಿದ್ಧತೆಯ ವಾರ: ಈ ವಾರದಲ್ಲಿ ಶಿಬಿರಕ್ಕೆ ಬರುವ ಮಕ್ಕಳು ಶಿಬಿರದ ಪರಿಸರಕ್ಕೆ ಹೊಂದಿಕೊಳ್ಳುವಂತೆ ನೋಡಿಕೊಳ್ಳುವುದು.

(i) ಈ ಹಂತದಲ್ಲಿ ಗಮನದಲ್ಲಿಡ ಬೇಕಾದ ಸಂಗತಿಗಳು: • ಮಕ್ಕಳು ಶಿಬಿರಕ್ಕೆ ಹೊಂದಿಕೊಳ್ಳುವಂತೆ ನೋಡಿಕೊಳ್ಳುವುದು. • ಮಕ್ಕಳು ಮತ್ತು ಶಿಕ್ಷಕರ ನಡುವಿನ ಬಾಂದವ್ಯ ಉತ್ತಮಪಡಿಸಿಕೊಳ್ಳುವುದು. • ಮಕ್ಕಳಿಗೆ ಸಂತೋಷ ವಾತಾವರಣವನ್ನುಂಟು ಮಾಡುವುದು. • ಮಕ್ಕಳೇ ಪ್ರೇರಕರ ಹತ್ತಿರ ತಮಗೆ ಅಕ್ಷರಭ್ಯಾಸ ಕಲಿಸಿ ಎಂದು ಕೇಳಿ ಕೊಳ್ಳುವಷ್ಠರ ಮಟ್ಟಿಗೆ ವಾತಾವರಣವನ್ನು ಕಲ್ಪಿಸುವುದು

(ii) ಈ ಹಂತದಲ್ಲಿ ಮಾಡಬಹುದಾದ ಚಟುವಟಿಕೆಗಳು: • ಮಕ್ಕಳ ಹೆಸರು ಹೇಳಿಸುವುದು ಮತ್ತು ಅವರ ಹಿನ್ನೆಲೆ ತಿಳಿದುಕೊಳ್ಳುವುದು. • ಮಕ್ಕಳಿಗೆ ಗೊತ್ತಿರುವ ಹಾಡು ಹಾಡಿಸುವುದು, ಕಥೆ, ಗಾದೆ, ಒಗಟುಗಳನ್ನು ಅವರಿಂದಲೇ ಹೇಳಿಸುವುದು. • ಪ್ರೇರಕರು ಕಥೆ ಹೇಳುವುದು. • ಮಕ್ಕಳಿಗೆ ಬರುವ ಆಟಗಳನ್ನು ಆಡಿಸುವುದು.• ಕೈ ಸಾಧನೆಯ ಅಭ್ಯಾಸಗಳನ್ನು ಮಾಡುವುದು. • ಮಕ್ಕಳಿಂದ ಚಿತ್ರಗಳನ್ನು ಬಿಡಿಸುವುದು.

2) ಅರಿವಿನ ಜಾಗೃತಿಯ ಕಾರ್ಯಕ್ರಮಗಳು: ಮಾರ್ಗದರ್ಶನಗಳು ಮುಂದಿನ ಪುಟಗಳಲ್ಲಿ ಬರುತ್ತವೆ.

3) ಸೇತುಶಿಕ್ಷಣದ ಕೊನೆಯಲ್ಲಿ ಕಲಿಕೆಯ ದೃಢೀಕರಣದ ಮತ್ತು ಮೌಲ್ಯಮಾಪನದಚಟುವಟಿಕೆಗಳು: ಇವನ್ನು ಸಿದ್ಧಪಡಿಸಬೇಕಾಗಿದೆ.

3. **ಪ್ರೇರಕರ ಪಾತ್ರ** : • ಬೋಧಕನು ಮಕ್ಕಳೊಡನೆ ಸ್ನೇಹ ಪೂರ್ವಕವಾಗಿ ನಡೆದುಕೊಳ್ಳುವುದು • ಚರ್ಚೆ ಅಥವಾ ಕಲಿಯುವ ಸಮಯದಲ್ಲಿ ಮಗು ತಪ್ಪು ಮಾಡಿದರೆ ಅಥವಾ ತಪ್ಪಾಗಿ ಉತ್ತರಿಹಸಿದರೆ ಅದನ್ನು ಮೂದಲಿಸಬಾರದು. • ತಾನು ಒಬ್ಬ ವಿದ್ಯಾರ್ಥಿ ಎಂಬಂತೆ ಮಕ್ಕಳೊಂದಿಗೆ ಬೆರೆಯಬೇಕು. • ಆಡುತ್ತಾ, ಆಡಿಸುತ್ತಾ, ನಗುತ್ತಾ, ನಗಿಸುತ್ತಾ, ಕಲಿಕೆಯನ್ನು ಮುಂದುವರಿಸಬೇಕು.

ಪ್ರೇರಕರಿಗೆ ಸೂಚನೆಗಳು 1



1. **ಅರಿವು:** ಪ್ರೇರಕನು ವಯಸ್ಕರಿಗೆ ಮೊದಲ ಸೂತ್ರವನ್ನು ತೋರಿಸಿ, ಅವರು ಸೂತ್ರದ ವಿವರಣೆಯನ್ನು (ಅಂದರೆ ಸಮಸ್ಯೆಯ ಬಗ್ಗೆ ಅರಿವು ಮತ್ತು ಅದನ್ನು ಬಗೆಹರಿಸಲು ಯೋಗ್ಯ ಕಾರ್ಯಕ್ರಮ ಹಾಕುವುದನ್ನು) ನೆರವೇರಿಸುವಂತೆ ನೋಡಿಕೊಳ್ಳುವನು. ಈ ಕಾರ್ಯವನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳಬೇಕು ಎಂಬುದನ್ನು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳಲ್ಲಿ ಕೊಡಲಾಗಿದೆ.

ಜಗಳ : ನಮ್ಮಲ್ಲಿ ಯಾವ ರೀತಿಯ ಜಗಳಗಳು ತಲೆದೋರುತ್ತವೆ? ಜಗಳಕ್ಕೆ ಕಾರಣಗಳು ಯಾವುವು? ಜಗಳದಿಂದಾಗುವ ಅನಿಷ್ಟಗಳೇನು? ಪ್ರಚಲಿತ ನ್ಯಾಯ ವ್ಯವಸ್ಥೆಯಿಂದ ಬಡ ಜನರಿಗೆ ಸುಲಭವಾಗಿ ನ್ಯಾಯ ಸಿಗುತ್ತದೆಯೇ? ಜಗಳವನ್ನು ತಪ್ಪಿಸಬಹುದೇ? ಏನು ಮಾಡಬೇಕು? ಕೂಟ ರಚನೆ ಮತ್ತು ಯೋಗ್ಯ ಮುಖಂಡರಿಂದ ನ್ಯಾಯ ದೊರಕಿಸಿ ಕೊಡುವಂತೆ ಮಾಡುವುದು. ದೊಡ್ಡ ಜಗಳಗಳನ್ನು ಮುಂದುವರಿಸುವುದರಿಂದ ಆಗುವ ಅನಾಹುತಗಳು ಯಾವುವು? ಪೋಲೀಸ್ ವ್ಯವಸ್ಥೆ, ಕೋರ್ಟು-ಕಛೇರಿಗಳು: ನ್ಯಾಯವ್ಯವಸ್ಥೆ.

2. **ಅಕ್ಷರ ಜ್ಞಾನ:** ಸೂತ್ರದ ಮೂಲಕ ಸಮಸ್ಯೆಯ ಬಗ್ಗೆ ಚರ್ಚೆ ಆದ ಮೇಲೆ ಸೂತ್ರದ ಸಮಸ್ಯೆಯ ಜನಕ ಶಬ್ದವನ್ನು ತೋರಿಸಿ, ಅಕ್ಷರ ಜ್ಞಾನದ ಹಂತವನ್ನು ನಡೆಸಿ ಕೊಳ್ಳಬೇಕು. ಇದರ ಬೇರೆ ಬೇರೆ ಹೆಜ್ಜೆಗಳನ್ನು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳಲ್ಲಿ ಕೊಡಲಾಗಿದೆ. ಅಕ್ಷರ ಪಟಗಳನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯ: 1) ಮೂಲಾಕ್ಷರ ಕಲಿತು ಕಾಗುಣಿತಗಳನ್ನು ಗುರುತಿಸುವಾಗ ಸಂಬಂಧಪಟ್ಟ ಅಕ್ಷರ ಪಟ ತೋರಿಸಿ ಕೇಳುವ ಪ್ರಶ್ನೆಗಳು:

ಅ) "ಈ ಎಲ್ಲಾ ಅಕ್ಷರಗಳಲ್ಲಿ ಒಂದೇ ರೀತಿಯಾಗಿರುವ ಭಾಗ ಮತ್ತು ಬೇರೆ ಬೇರೆ ರೀತಿಯಾಗಿರುವ ಭಾಗ ಏನಾದರೂ ಇದೆಯೇ?"

ಆ) "ಎಲ್ಲಾ ಅಕ್ಷರಗಳು ಒಂದೇ ರೀತಿ ಶುರುವಾಗಿ ಬೇರೆ ಬೇರೆ ರೀತಿ ಅಂತ್ಯವಾದರೆ ಅವನ್ನು ಜ/ಗ/ಳ ಎಂತಲೇ ಕರೆಯಬಹುದೇ?"

2) ಜ, ಗ, ಳ ಅಕ್ಷರಗಳನ್ನು ಒಂದರ ಕೆಳಗೆ ಒಂದರಂತೆ ಬರೆದು ತೋರಿಸಿ ಕೊನೆಯ ಸ್ವರಾಕ್ಷರಗಳನ್ನು ಗುರುತಿಸಲು ಕೇಳಬೇಕಾದ ಪ್ರಶ್ನೆ:

"ಈ ಎಲ್ಲಾ ಬೇರೆ ಬೇರೆ ಅಕ್ಷರಗಳಲ್ಲಿ ಒಂದೇ ರೀತಿಯಾಗಿರುವ ಭಾಗ ಯಾವುದಾದರೂ ಇದೆಯೇ?"

ಇದೇ ಪ್ರಶ್ನೆಯನ್ನು ಜಾ, ಗಾ, ಳಾ; ಜಿ, ಗಿ, ಳಿ ಹೀಗೆ ಜಃ, ಗಃ, ಳಃ ತನಕವೂ ಒಂದರ ಕೆಳಗೆ ಒಂದರಂತೆ ಬರೆದು ಪ್ರತಿಸಾರಿ ಕೇಳಬೇಕು.

3) ಜ, ಗ, ಳ ಅಕ್ಷರಗಳಲ್ಲಿ ಕೊನೆಯಲ್ಲಿ 'ಅ' ಸ್ವರ ಬಂದರೆ, 'ಅ' ಇಲ್ಲದಾಗ ಅಕ್ಷರ ಏನಾಗುತ್ತದೆ? ಎಂದು ಕೇಳಿ ಅರ್ಧಾಕ್ಷರಗಳಾದ 'ಜ್', 'ಗ್', 'ಳ್' ಅಕ್ಷರಗಳನ್ನು

ಓದಲು ಬರೆಯಲು ಕಲಿಯುವಂತೆ ಮಾಡುವುದು. (ಮುಂದಿನ ಸಮಸ್ಯೆಗಳಲ್ಲಿ ಸ್ವರಾಕ್ಷರಗಳ ಕಲಿಕೆ ಬಿಟ್ಟು ಅಕ್ಷರಜ್ಞಾನದ ಉಳಿದೆಲ್ಲಾ ಅಂಶಗಳನ್ನು ಅಂದರೆ ಹೊಸ ಅಕ್ಷರ, ಅದರ ಕಾಗುಣಿತ ಮತ್ತು ಅರ್ಧಾಕ್ಷರಗಳನ್ನು ಕಲಿಯಬೇಕಾಗುತ್ತದೆ).

3. **ಕೈ ಸಾಧನೆಯ ಅಭ್ಯಾಸಗಳು:** 11ನೇ ಪುಟವನ್ನು ನೋಡಿ.

4. **ಶಬ್ದ ರಚನೆ** : ಜನಕ ಶಬ್ದದ ಅಕ್ಷರಗಳನ್ನು ಕಲಿತ ಮೇಲೆ ಆ ಅಕ್ಷರಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲು ಪ್ರೇರಕನು ವಯಸ್ಕರಿಗೆ ನೆರವಾಗುತ್ತಾನೆ. ಇದರ ವಿವರ ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳಲ್ಲಿ ಕೊಡಲಾಗಿದೆ. ಇಲ್ಲಿ ಪ್ರೇರಕ ಕೇಳಬೇಕಾದ ಪ್ರಶ್ನೆ: "ನಾವು ಕಾಣುವ ಬೇರೆ ಬೇರೆ ಅಕ್ಷರಗಳಿಂದ ಏನನ್ನಾದರೂ ನಾವು ರಚಿಸಬಹುದೋ?" ಕನ್ನಡದ ಎಲ್ಲಾ ಅಕ್ಷರಗಳ ಕಾಗುಣಿತಗಳ ಅಕ್ಷರಪಟಗಳನ್ನು ಸೂತ್ರಮಾಲೆಯಲ್ಲಿ ಬರುವ ಸಮಸ್ಯೆಗಳಲ್ಲಿಯ ಶಬ್ದಗಳ ಅಕ್ಷರಗಳನ್ನನುಸರಿಸಿ ಪ್ರತ್ಯೇಕವಾಗಿ ಕೊಡಲಾಗಿದೆ. ಸಂಬಂಧಪಟ್ಟ ಅಕ್ಷರ ಅವುಗಳ ಕಾಗುಣಿತಗಳನ್ನು ಮಾತ್ರ ಬಳಸಬೇಕಾಗುವುದು. ವಯಸ್ಕರು ಕಂಡುಹಿಡಿದ ಪದಗಳನ್ನು ಪ್ರೇರಕನು ತನ್ನ ದಾಖಲು ಪುಸ್ತಕದಲ್ಲಿ ಬರೆದಿಟ್ಟರೆ ಉತ್ತಮ. (ಮುಂದಿನ ಸಮಸ್ಯೆಗಳಲ್ಲಿ ಹೊಸ ಅಕ್ಷರಗಳ ಜೊತೆಗೆ ಹಿಂದೆ ಕಲಿತ ಎಲ್ಲಾ ಅಕ್ಷರಗಳನ್ನು ಜೋಡಿಸಿ ಪದಮಾಡ ಬೇಕಾಗುವುದು).

ಸೂಚನೆ : ಪದಜೋಡಣೆ ಮಾಡುವಾಗ ಒತ್ತಕ್ಷರವಿರುವ ಪದಗಳನ್ನು ಗುರುತಿಸಿದರೆ (ಉದಾ: ಅ ಮತ್ತು ಜ ಸೇರಿಸಿ 'ಅಜ್ಜ' ಎಂದು ಉಚ್ಚಾರ ಮಾಡಿದರೆ ಒತ್ತಕ್ಷರದ ಬಗ್ಗೆ ಶಿಕ್ಷಾರ್ಥಿಗಳು ಕಲಿಯುವಂತೆ ನೋಡಿಕೊಳ್ಳುವುದು.

5. **ವಾಕ್ಯರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ಇಷ್ಟರವರೆಗೆ ವಯಸ್ಕರು ಕಂಡುಹಿಡಿದ ಹೊಸ ಶಬ್ದಗಳನ್ನು ಪ್ರೇರಕನು ಒಂದೇ ಹಾಳೆಯಲ್ಲಿ ಬರೆದು, ಅವನ್ನು ವಯಸ್ಕರಿಗೆ ತೋರಿಸಿ "ಇವುಗಳಿಂದ ನಾವೇನಾದರು ಮಾಡಬಹುದೋ?" ಎಂದು ಕೇಳುತ್ತಾನೆ. ವಯಸ್ಕರಿಗೆ ತಮ್ಮ ಮೊದಲ ವಾಕ್ಯ ರಚಿಸಲು ಸ್ವಲ್ಪ ಸಮಯ ಹಿಡಿಯಬಹುದು. ಆದರೆ ಒಂದು ಸಾರಿ ವಾಕ್ಯ ಮಾಡಲು ಕಲಿತ ಮೇಲೆ ಮುಂದೆ ಸುಲಭದಲ್ಲಿಯೇ ತಮ್ಮ ಅನುಭವಗಳಿಗನುಸಾರವಾಗಿ ಸೊಗಸಾಗಿ ವಾಕ್ಯಗಳನ್ನು ವಯಸ್ಕರು ರಚಿಸಬಲ್ಲರು. (ಮುಂದಿನ ಸಮಸ್ಯೆಗಳಲ್ಲಿ ಹೊಸ ಪದಗಳ ಜೊತೆ ಹಿದೆ ರೂಪಿಸಿದ ಪದಗಳನ್ನೂ ಸೇರಿಸಿ ವಾಕ್ಯಗಳನ್ನು ಮಾಡಬಹುದು).

6. **ಸಂಖ್ಯಾ ಜ್ಞಾನ:** ಅಕ್ಷರಜ್ಞಾನದೊಡನೆ ಸಂಖ್ಯಾಜ್ಞಾನದ ಕಡೆಗೂ ಮೊದಲ ಸೂತ್ರದಿಂದಲೇ ಗಮನ ಹರಿಸಬಹುದು. ಇದಕ್ಕೋಸ್ಕರ ಅಕ್ಷರ ಜ್ಞಾನದಲ್ಲಿ ಬಳಸಲಾದ ತತ್ವಗಳನ್ನೇ ಉಪಯೋಗಿಸಲಾಗುವುದು. ಮುಖ್ಯವಾಗಿ ಪ್ರಶ್ನೆಗಳನ್ನು ಕೇಳುವುದರ ಮುಖಾಂತರ ವಯಸ್ಕರೇ ಹೊಸ ವಿಷಯಗಳನ್ನು ಕಂಡುಹಿಡಿಯವಂತೆ ನೋಡಿಕೊಳ್ಳಲಾಗುವುದು.

ಪ್ರೇರಕನು ಒಂದು ಬೆರಳು ನೆಟ್ಟಗಿರುವ ಕೈಯ ಚಿತ್ರವನ್ನು ತೋರಿಸಿ ಅಥವಾ ಒಂದು ಬೆರಳು ಮಾತ್ರ ನೆಟ್ಟಗಿರುವ ಒಂದು ಕೈಯನ್ನು ಎತ್ತಿ ತೋರಿಸಿ "ಅಲ್ಲಿ ಕಾಣುವ ಬೆರಳುಗಳೆಷ್ಟು?" ಎಂದು ಕೇಳುವನು. ಅದಕ್ಕೆ "ಒಂದು" ಎಂದು ವಯಸ್ಕರು ಉತ್ತರಿಸುವರು. ನಂತರ ಪ್ರೇರಕನು ಒಂದನ್ನು ಅಂಕಿಯ ರೂಪ (1) ದಲ್ಲಿ ಬರೆಯುವುದನ್ನು ತೋರಿಸುವನು. ವಯಸ್ಕರು ಅದನ್ನೇ ಓದಲು, ಬರೆಯಲು ಕಲಿಯುವರು.

7. **ಅಭ್ಯಾಸ ಚಟುವಟಿಕೆಗಳು :**

1) 2" x 2" ಅಳತೆಯ ಮಿಂಚು ಪಟ್ಟಿಗಳಲ್ಲಿ ಕಲಿತ ಅಕ್ಷರಗಳ ಕಾಗುಣಿತಗಳನ್ನು ಮತ್ತು ಅರ್ಧಾಕ್ಷರಗಳನ್ನು ಬರೆಯುವುದು. ಉದಾ : ಜ ಜಾ ... ಜಃ ಜ್

2) ಪ್ರೇರಕನು ಒಂದು ಅಕ್ಷರವನ್ನು ಹೇಳಿ ಅದೇ ಅಕ್ಷರವಿರುವ ಮಿಂಚುಪಟ್ಟಿಯನ್ನು ಗುರುತಿಸಲು ಹೇಳುವುದು.

3) ಪ್ರೇರಕನು ಒಂದು ಅಕ್ಷರ ಹೇಳಿದಾಗ ಆ ಅಕ್ಷರವನ್ನು ಕಪ್ಪು ಹಲಗೆ ಅಥವಾ ನೋಟ್ ಪುಸ್ತಕದಲ್ಲಿ ಬರೆಯುವುದು.

4) ಅರ್ಧಾಕ್ಷರಗಳಿಗೆ ಸ್ವರಾಕ್ಷರಗಳನ್ನು ಸೇರಿಸಿ ಕಾಗುಣಿತ ಬರೆದು ತೋರಿಸಲಿಕೆ ಹೇಳುವುದು. ಉದಾ ಜ್ + ಅ = ಜ   ಗ್ + ಊ = ಗೂ

5) ಮಿಂಚು ಪಟ್ಟಿಗಳನ್ನು ಉಪಯೋಗಿಸಿಕೊಂಡು ಬೇರೆ ಬೇರೆ ಅಕ್ಷರಗಳನ್ನು ಜೋಡಿಸುವುದು ಜೋಡಿಸುವಾಗ ಅರ್ಥಕೊಡುವ ಪದ ಬಂದರೆ ಅದನ್ನು ಗುರುತಿಸುವಂತೆ ಮಾಡಿ ಅದನ್ನು ದೊಡ್ಡ ಮಿಂಚು ಪಟ್ಟಿ (4" x 2") ಯಲ್ಲಿ ಬರೆಯುವುದು. ಜೊತೆಗೆ ಕಪ್ಪು ಪಲಗೆಯಲ್ಲಿ ಅಥವಾ ನೋಟ್ ಪುಸ್ತಕದಲ್ಲಿ ಬರೆಯುವುದು.

ಉದಾ ಅಂ ಗ ಳ → ಅಂಗಳ

6) ಚೌಕಗಳಲ್ಲಿರುವ ಒಂದೇ ರೀತಿಯ ಅಕ್ಷರಗಳನ್ನು ಗುರುತಿಸಿ ವೃತ್ತ ಹಾಕುವಂತೆ ಮಾಡುವುದು.

ಜ	(ಜಿ)	ಜು
ಜೈ	ಜಂ	ಜಾ
(ಜಿ)	ಜೇ	ಜೃ

7) ಪದಗಳನ್ನು ಬರೆದ ಮಿಂಚು ಪಟ್ಟಿಗಳನ್ನು ಜೋಡಿಸಿ ಅರ್ಥ ಕೊಡುತ್ತದೆಯೇ ಎಂದು ನೋಡುವುದು. ಅರ್ಥ ಕೊಡುವಂತಿದ್ದರೆ ಆ ವಾಕ್ಯವನ್ನು ಕಪ್ಪು ಪಲಗೆಯಲ್ಲಿ ಅಥವಾ ನೋಟ್ ಪುಸ್ತಕದಲ್ಲಿ ಬರೆಯುವುದು.

ಉದಾ: ಈಗ ಜಿಗಿ → ಈಗ ಜಿಗಿ ; ಗಂಗೆ ಏಳು → ಗಂಗೆ ಏಳು

8) ಮಕ್ಕಳಿಗೆ ಯಾವುದಾದರೂ ಒಂದು ವಸ್ತುವನ್ನು ತೋರಿಸುತ್ತಾ ಅದು ಎಷ್ಟು ಎಂದು ಕೇಳುವುದು ಮತ್ತು ಅದನ್ನು ಬರೆಯಲಿಕ್ಕೆ ಹೇಳುವುದು.

9) ಮೇಲಿನ ಸಮಸ್ಯೆ ಬಗ್ಗೆ ಮಕ್ಕಳಿಗೆ 1 ಅಥವಾ 2 ನಿಮಿಷ ಗುಂಪಿನ ಮುಂದೆ ಮಾತಾಡಲು ಅವಕಾಶ ಕೊಡುವುದು.

ಗಮನಿಸಿ : ಮುಂದಿನ ಸಮಸ್ಯೆಗಳಲ್ಲಿಯೂ ಕೂಡಾ ಇದೇ ಮಾದರಿಯ ಚಟುವಟಿಕೆಗಳನ್ನು ಅಕ್ಷರ ಕಲಿಯಲು, ಪದ ಮತ್ತು ವಾಕ್ಯ ರಚನೆ ಮಾಡಲು, 1ರಿಂದ 9ರ ವರೆಗಿನ ಅಂಕಿಗಳನ್ನು ಹಾಗೂ 10 ಸಂಖ್ಯೆಯನ್ನು ಕಲಿಯಲು ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಿ ಬಳಸಬೇಕು. ಹೊಸ ಚಟುವಟಚಿಕೆಗಳಿದ್ದರೆ ಅವನ್ನು ಅಲ್ಲಲ್ಲಿ ನಮೂದಿಸಲಾಗುವುದು.

8. ಮೌಲ್ಯಮಾಪನ ಚಟುವಟಿಕೆಗಳು :

1) ಖಾಲಿ ಮನೆಗಳನ್ನು ತುಂಬಿರಿ.

ಉದಾ. ಜ □ ಳ (ಗ); □ ಗೆ (ಗಂ); ಗೂ □ ಗಳು (ಳಿ)

2) ಚೌಕದಲ್ಲಿ ಒಂದೇ ಬಗೆಯ ಅಕ್ಷರಗಳನ್ನು ಗುರುತಿಸಿ ವೃತ್ತ ಹಾಕಿ:

ಜೊ	ಗೌ	ಜ	ಳಿ
ಗೋ	ಜೃ	ಳೆ	ಗು
ಜಃ	ಳಿ	ಜೊ	ಳೃ
ಗೌ	ಜಾ	ಳೌ	ಗಂ

3) ಕೂಡಿಸಿ ಬರೆಯಿರಿ:

ಜ್ + ಎ = ______; ಗ್ + ಊ = ______; ಳ್ + ಋ = ______;
ಗ್ + ಈ = ______; ಳ್ + ಅಂ = ______; ಜ್ + ಐ = ______;

4) ಈ ಕಾಗುಣಿತಗಳಲ್ಲಿ ಬರುವ ಸ್ವರಾಕ್ಷರ ಗುರುತಿಸಿ ಬರೆಯಿರಿ :

ಳೀ ______; ಜಿ ______; ಗೊ ______;

ಜಃ ______; ಗಾ ______; ಗೌ ______.

5) 'ಒಂದು' ಇದನ್ನು ಅಂಕಿಯಲ್ಲಿ ಹೇಗೆ ಬರೆಯುತ್ತೀರಿ ?

9. ಹೆಚ್ಚುವರಿ ಚಟುವಟಿಕೆಗಳು :

1) ಮಕ್ಕಳು ಊರ ಮುಖಂಡರನ್ನು ಭೇಟಿಯಾಗಿ ಊರ ಪಂಚಾಯಿಯಲ್ಲಿ ಆಗುವ ನ್ಯಾಯಗಳ ಬಗ್ಗೆ ತಿಳಿದು ಗುಂಪಿನಲ್ಲಿ ವಿವರಿಸುವುದು.

2) ಮಕ್ಕಳು ಒಂದು ಪೋಲೀಸ್ ಕಛೇರಿಯನ್ನು ಭೇಟಿಯಾಗಿ ಪೋಲೀಸ್ ವ್ಯವಸ್ಥೆ, ಕಾನೂನು ರಕ್ಷಣೆ ಬಗ್ಗೆ ತಿಳಿದು ಗುಂಪಲ್ಲಿ ವಿವರಿಸುವುದು.

3) ಸಾಧ್ಯವಿದ್ದರೆ ಒಂದು ನ್ಯಾಯಾಲಯಕ್ಕೆ ಭೇಟಿಯಾಗಿ ನ್ಯಾಯ ವ್ಯವಸ್ಥೆ,ನ್ಯಾಯಾಂಗದ ಬಗ್ಗೆ ತಿಳಿದುಕೊಳ್ಳುವುದು.

ಪ್ರೇರಕರಿಗೆ ಸೂಚನೆಗಳು 2



1. ಅರಿವು : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಕೂಲಿ : ಕರ್ನಾಟಕದ ಕಾನೂನಿನ ಪ್ರಕಾರ ಕನಿಷ್ಠ ಕೂಲಿ ಎಷ್ಟು? ಅದು ಸಿಗುತ್ತದೋ? ಕೆಲಸದ ಪ್ರಾಧಾನ್ಯ: ಉತ್ಪನ್ನ ಕೆಲಸದಿಂದ; ಹೆಚ್ಚುವರಿ ಬೆಲೆ ಕೆಲಸದಿಂದ; ಕೆಲಸವಿಲ್ಲದೇ ಉತ್ಪನ್ನವಿಲ್ಲ. ಆದರೆ ಪ್ರಚಲಿತ ಸ್ಥಿತಿ: ಬಂಡವಾಳ ಹಾಕಿದವರಿಗೆ, ಭೂಮಿ ಅಧಿಕ ಇದ್ದವರಿಗೆ ಉತ್ಪನ್ನದ ಸಿಂಹಪಾಲು. ಫಲದ ಯೋಗ್ಯವಾದ ಪಾಲು ಕೆಲಸದಾಳುಗಳಿಗೆ ಬರಲು ಏನು ಮಾಡಲು ಸಾಧ್ಯ? ಕೆಲಸದಾಳುಗಳು ಮೊದಲು ಊರಿನವರ ನಂತರ ಅಕ್ಕಪಕ್ಕದ ಊರುಗಳ ಕೆಲಸದಾಳುಗಳ ಸಂಘಟನೆ.

2. **ಅಕ್ಷರ ಜ್ಞಾನ** : ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರಗಳನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕಾಗುತ್ತದೆ. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ.

3. **ಶಬ್ದ ರಚನೆ:** ಎರಡನೇ ಸೂತ್ರದಲ್ಲಿ ಕಲಿತ ಅಕ್ಷರಗಳೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ.

4. **ವಾಕ್ಯರಚನೆ** : ಒಂದನೇ ಸಮಸ್ಯೆಯಲ್ಲಿ ಕೊಟ್ಟವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ.

5. **ಸಂಖ್ಯಾಜ್ಞಾನ** : ಮೊದಲ ಸೂತ್ರದಲ್ಲಿ ಕೊಟ್ಟ ಕ್ರಮವನ್ನೇ ಅನುಸರಿಸಿ '2' ಅಂಕಿಯನ್ನು ವಯಸ್ಕರು ಕಲಿಯುವಂತೆ ನೋಡಿ ಕೊಳ್ಳಲಾಗುವುದು. ನಂತರ ಕೂಡಿಸುವ ಮತ್ತು ಕಳೆಯುವ ವಿಚಾರಗಳನ್ನು ಪ್ರಸ್ತಾಪಿಸಲಾಗುವುದು. ವಯಸ್ಕರ ಜೀವನದ ಉದಾಹರಣೆಗಳನ್ನು ಕೊಟ್ಟರೆ ಉತ್ತಮ. ಉದಾ: ರಾಮಪ್ಪನಿಗೆ ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು ಇದ್ದರೆ ಅವನಿಗೆ ಒಟ್ಟು ಎಷ್ಟು ಮಕ್ಕಳು? ಇತ್ಯಾದಿ. ಕಳೆಯುವ ಮುಖಾಂತರ ಸೊನ್ನೆಯನ್ನು ಬರೆಯುವ ರೀತಿಯನ್ನು ವಯಸ್ಕರು ಕಲಿಯುವಂತೆ ಪ್ರೇರಕನು ಕಾರಣನಾಗುವನು. ಉದಾ:

ಪ್ರೇರಕ : "ಒಂದಕ್ಕೆ ಒಂದನ್ನು ಕೂಡಿಸಿದರೆ ಎಷ್ಟಾಗುತ್ತದೆ?" ವಯಸ್ಕ "ಎರಡು"

ಒಂದು ಕೂಡಿಸು ಒಂದು ಅಂದರೆ ಎರಡು ಅಥವಾ 1 +
1 + 1 = 2 1

$$\begin{array}{r} 1\ + \\ 1 \\ \hline 2 \\ \hline \end{array}$$

ಪ್ರೇರಕ : "ಎರಡರಿಂದ ಒಂದನ್ನು ಕಳೆದರೆ ಎಷ್ಟು ಉಳಿಯುತ್ತದೆ?" ವಯಸ್ಕ "ಒಂದು"

ಎರಡು ಕಳೆ ಒಂದು ಅಂದರೆ ಒಂದು

2 − 1 = 1

ಅಥವಾ

$$\begin{array}{r} 2 - \\ 1 \\ \hline 1 \\ \hline \end{array}$$

ಪ್ರೇರಕ : "ಎರಡರಿಂದ ಎರಡನ್ನೂ ಕಳೆದರೆ ಎಷ್ಟು ಉಳಿಯುತ್ತದೆ?"

ವಯಸ್ಕ: "ಏನೂ ಇಲ್ಲ".

ಪ್ರೇರಕನು ಆಗ "ಏನೂ ಇಲ್ಲ" ಎನ್ನುವುದನ್ನು ಸೊನ್ನೆಯ ರೂಪ (0) ದಲ್ಲಿ ಬರೆಯುವುದನ್ನು ತೋರಿಸುವನು.

$$\begin{array}{r} 2 - \\ 2 \\ \hline 0 \\ \hline \end{array} \qquad \begin{array}{r} 1 - \\ 1 \\ \hline 0 \\ \hline \end{array} \qquad \begin{array}{r} 2 + \\ 0 \\ \hline \\ \hline \end{array} \qquad \begin{array}{r} 1 + \\ 0 \\ \hline \\ \hline \end{array}$$

6. **ಅಭ್ಯಾಸ ಚಟುವಟಿಕೆಗಳು** : ಹಿಂದಿನ ಸಮಸ್ಯೆಯ ಮಾದರಿಗಳ ಜೊತೆ ಚಟುವಟಿಕೆ : ಕೆಲವುಪದಗಳ ಮಿಂಚುಪಟ್ಟಿಗಳನ್ನು ಮಕ್ಕಳಿಗೆ ಕೊಟ್ಟು ಓದಿಸುವುದು.

7. **ಮೌಲ್ಯಮಾಪನ ಚಟುವಟಿಕೆಗಳು.** ಹಿಂದಿನ ಸಮಸ್ಯೆಯ ಮಾದರಿಗಳನ್ನು ಬಳಸುವುದರ ಜೊತೆಗೆ ಈ ಚಟುವಟಿಕೆಗಳನ್ನು ಮಾಡಬಹುದು.

1) ಬಿಟ್ಟುಹೋದ ಅಕ್ಷರಗಳನ್ನು ಭರ್ತಿಮಾಡಿ ಬರೆಯಿರಿ.

ಕ		ಕಿ	ಕೀ		ಕೂ	ಕೃ	ಕೆ			ಕೊ		ಕೌ		ಕಃ	
ಲ	ಲಾ		ಲೀ	ಲು			ಲೆ		ಲೈ		ಲೋ		ಲಂ		ಲ್
	ಆ	ಇ			ಊ			ಏ			ಓ		ಅಂ		

2) ರಾಮಣ್ಣನು ತನ್ನ ಎರಡು ಹಸುಗಳನ್ನು ಮಾರಿದರೆ ಅವನಲ್ಲಿ ಎಷ್ಟು ಹಸುಗಳು ಉಳಿದವು?

3) ಕಾವೇರಮ್ಮನ ಕುರಿಯು ಮರಿ ಹಾಕಿದಾಗ ಎಷ್ಟು ಕುರಿಗಳಾಗುತ್ತವೆ ?

8. **ಹೆಚ್ಚುವರಿ ಚಟುವಟಿಕೆಗಳು** :

1) ಮಕ್ಕಳು ತಮ್ಮ ಊರಿನಲ್ಲಿ ಬೇರೆ ಬೇರೆ ಕೆಲಸಗಳಿಗೆ, ಬೇರೆ ಬೇರೆ ಕಾಲಗಳಲ್ಲಿ ಮತ್ತು ಗಂಡಸರಿಗೆ ಹಾಗೂ ಹೆಂಗಸರಿಗೆ ಸಿಗುವ ಕೂಲಿಗಳ ಪಟ್ಟಿ ಮಾಡಿ ಗುಂಪಿಗೆ ತಿಳಿಸುವುದು.

2) ಸಾಧ್ಯವಿದ್ದರೆ ಮಕ್ಕಳು ಕಾರ್ಮಿಕ ಅಧಿಕಾರಿಯಿಂದ ಕನಿಷ್ಟ ವೇತನ ಕಾನೂನು ಮತ್ತು ಕನಿಷ್ಟ ವೇತನಗಳ ಬಗ್ಗೆ ತಿಳಿದು ಗುಂಪಿಗೆ ತಿಳಿಸುವುದು.

ಪ್ರೇರಕರಿಗೆ ಸೂಚನೆಗಳು 3



1. **ಅರಿವು** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಆಹಾರ: ಆಹಾರದ ಅಭಾವಕ್ಕೆ ಕಾರಣ ಏನು? ಎಲ್ಲರು ತಿಂದು ತೇಗುವಷ್ಟು ಆಹಾರ ಧಾನ್ಯಗಳ ಉತ್ಪನ್ನವಾಗುತ್ತಿದ್ದರೂ ಹಲವರು ಹಸಿವಿನಿಂದ ನರಳುವ ಪರಿಸ್ಥಿತಿ. ಪೌಷ್ಟಿಕ ಆಹಾರದ ಅಭಾವ. ಅದರಿಂದ ಆಗುವ ಪರಿಣಾಮಗಳು: ಹಸಿವು, ರೋಗ, ಬಾಲ್ಯ ಮರಣ.... ಆಹಾರದಲ್ಲಿ ಪೌಷ್ಟಿಕಾಂಶವನ್ನು ನಮ್ಮ ಪರಿಸರಿದಿಂದಲೇ ಬರುವಂತೆ ನೋಡಿಕೊಳ್ಳಬಹುದೇ? ಹೇಗೆ?

2. **ಅಕ್ಷರ ಜ್ಞಾನ:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಇಲ್ಲಿ ಸ್ವರಾಕ್ಷರಗಳನ್ನು ಹೊಸದಾಗಿ ಕಲಿಯಬೇಕೆಂದಿಲ್ಲ. ಅರ್ಧಾಕ್ಷರ ಮಾತ್ರ ಕಲಿಬೇಕು.

3. **ಶಬ್ದರಚನೆ ಮತ್ತು ವಾಕ್ಯ ರಚನೆ:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-46 ಪುಟಗಳು ನೋಡಿ. ವಯಸ್ಕರು ಜೋಡಿಸಿದ ಪದಗಳನ್ನು ಮತ್ತು ಸಾಧ್ಯವಾದರೆ ವಾಕ್ಯಗಳನ್ನು ಪ್ರೇರಕರು ಒಂದೆಡೆ ಬರೆದಿಡಬೇಕು.

4. **ಸಂಖ್ಯಾಜ್ಞಾನ** : ಒಂದನೇ ಸೂತ್ರದಲ್ಲಿ ಕೊಟ್ಟ ಕ್ರಮವನ್ನೇ ಅನುಸರಿಸಿ `3' ಅಂಕಿಯನ್ನು ವಯಸ್ಕರು ಕಲಿಯುವಂತೆ ಮಾಡುವುದು.

   3 ಅಂಕಿಯೊಳಗೆ ಕೂಡಿಸುವ, ಕಳೆಯುವ ಗಣಿತಗಳು. (ಇದೇ ಮಾದರಿಯಲ್ಲಿ ಹತ್ತು ಸಂಖ್ಯೆ ತನಕವೂ ಕಲಿಯುವುದು).

1 + 1 + 1 =	3 – 1 =
2 + 1 =	3 – 2 =
3 + 0 =	3 – 0 =

1 +						
1	2 +	3 +	3 –	3 –	3 –	3 –
1	1	0	1	2	3	0

5. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಸಮಸ್ಯೆಯ ಮಾದರಿಗಳ ಜೊತೆಗೆ ಚಟುವಟಿಕೆಗಳು.

1) ಗೊತ್ತಿದ್ದರೆ ಹೇಳು ಆಟ: ಪದಗಳ ಮಿಂಚು ಪಟ್ಟಿಗಳನ್ನು ಬೋರಲು ಹಾಕಬೇಕು. ಪ್ರೇರಕ ಒಂದು ಮಿಂಚು ಪಟ್ಟಿಯನ್ನು ಎತ್ತಿ ತೋರಿಸಿ ಮಗುವಿನ ಎದುರು ಹಿಡಿಯಬೇಕು. ಮಗು ತಕ್ಷಣ ಅದನ್ನು ಹೇಳಬೇಕು.

2) ಮೂವರು ವಿಧ್ಯಾರ್ಥಿಗಳನ್ನು ಕರೆಯಿರಿ. ಒಬ್ಬರಿಗೆ 2, ಇನ್ನೊಬ್ಬರಿಗೆ 1 ಹುಣಸೆ ಬೀಜಗಳನ್ನು ಕೊಡಿರಿ. ಅವರಲ್ಲಿರುವ ಬೀಜಗಳ ಅಂಕಿಯನ್ನು ಕಪ್ಪು ಹಲಗೆ ಮೇಲೆ ಒಂದರ ಕೆಳಗೆ ಒಂದು ಬರೆಯುವಂತೆ ತಿಳಿಸಿ. ನಂತರ ಇಬ್ಬರು ವಿಧ್ಯಾರ್ಥಿಗಳು ತಮ್ಮ ಹುಣಸೆ ಬೀಜಗಳನ್ನು ಮೂರನೇ ವಿದ್ಯಾರ್ಥಿಗೆ ಕೊಡಲು ತಿಳಿಸಿ. ಮೂರನೇ ವಿದ್ಯಾರ್ಥಿ ತನಗೆ ಸಿಕ್ಕಿದ ಹುಣಸೆ ಬೀಜಗಳನ್ನು ಲೆಕ್ಕ ಮಾಡಿ ಕಪ್ಪು ಹಲಗೆಯಲ್ಲಿ ಆಗಲೇ ಬರೆದಿರುವ ಎರಡು ಅಂಕಿಗಳ ಕೆಳಗೆ ಬರೆಯಲು ಅವನಿಗೆ ತಿಳಿಸುವುದು. ○ + ○ ○ = ○○○ (1 + 2 = 3)

3) ಒಬ್ಬನಿಗೆ 3 ಹುಣಸೆ ಬೀಜಗಳನ್ನು ಕೊಟ್ಟು ಅವುಗಳಲ್ಲಿ 2 ಬೀಜಗಳನ್ನು ಇನ್ನೊಬ್ಬನಿಗೆ ಕೊಡಲು ತಿಳಿಸಿ ಮತ್ತೊಬ್ಬ ವಿದ್ಯಾರ್ಥಿ ಮೊದಲ ವಿದ್ಯಾರ್ಥಿಯಲ್ಲಿ ಎಷ್ಟು ಹುಣಸೆ ಬೀಜಗಳು ಉಳಿದವು ಎಂದು ತಿಳಿಸಲಿ. ○○○ – ○ ○ = ○ (3 – 2 = 1)

6. **ಮೌಲ್ಯಮಾಪನದ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆಗೆ ಚಟುವಟಿಕೆಗಳು.

1) ಇದುವರೆಗೆ ಕಲಿತ ಅಕ್ಷರಗಳಿಂದ 5 ಪದಗಳನ್ನು ಮತ್ತು 2 ವಾಕ್ಯಗಳನ್ನು ರಚಿಸಿ.

2) ನಾಗಣ್ಣನ ಬಳಿ ಒಂದು ಪುಸ್ತಕ ಇದೆ. ಭೀಮಣ್ಣನ ಬಳಿ 2 ಪುಸ್ತಕ ಇವೆ. ಇವರಿಬ್ಬರ ಬಳಿ ಒಟ್ಟು ಎಷ್ಟು ಪುಸ್ತಕ ಇವೆ ?.

3) ಲಲಿತಳ ಬಳಿ 3 ಬಿಸ್ಕಿಟುಗಳಿವೆ. ತನ್ನ ತಂಗಿ ಸರಿತಾಳಿಗೆ 2 ಬಿಸ್ಕಿಟ್‌ಕೊಟ್ಟರೆ ಅವಳಲ್ಲಿ ಎಷ್ಟು ಬಿಸ್ಕಿಟ್ ಉಳಿದುವು ?

7. **ಹೆಚ್ಚುವರಿ ಚಟುವಟಿಕೆಗಳು**

1) ಮನೆಯಲ್ಲಿ ಊಟಕ್ಕೆ ಬಳಸುವ ವಿವಿಧ ಧಾನ್ಯಗಳು, ತರಕಾರಿಗಳು, ಹಣ್ಣುಗಳು ಮತ್ತು ಪಾನೀಯಗಳನ್ನು ಪಟ್ಟಿ ಮಾಡಿ ಅವುಗಳಲ್ಲಿ ಇರುವ ಪೌಷ್ಟಿಕಾಂಶಗಳ ಬಗ್ಗೆ ಚರ್ಚೆ ಮಾಡುವುದು.

2) ಒಬ್ಬ ವೈದ್ಯ ಅಥವಾ ಆರೋಗ್ಯ ಕಾರ್ಯಕರ್ತೆಯನ್ನು ಭೇಟಿಯಾಗಿ ಆಹಾರದಲ್ಲಿರಬೇಕಾದ ಪೌಷ್ಟಿಕ ಅಂಶಗಳು ಯಾವುವು ? ಅವು ಯಾವುದರಲ್ಲಿ ಸಿಗುತ್ತವೆ ? ಎಂಬುದನ್ನು ತಿಳಿದು ಗುಂಪಿಗೆ ವಿವರಿಸುವುದು.

ಪ್ರೇರಕರಿಗೆ ಸೂಚನೆಗಳು 4



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಸಾಲ: ಸಾಲ ಮಾಡಲೇ ಬೇಕಾದ ಸಾಮಾನ್ಯ ಸಂದರ್ಭಗಳು. ಯಾವ ಕಾರಣಗಳಿಗೆ ಸಾಲದ ಮೊರೆ ಹೋಗುತ್ತಾರೆ? ಸಾಲ ಮರುಪಾವತಿ ಮಾಡಲಿರುವ ನಿಯಮಗಳು. ಬಡ್ಡಿಯದರ, ಅವಧಿ. ಸಾಲ ಸಕಾಲದಲ್ಲಿ ಮರುಪಾವತಿ ಮಾಡದಿದ್ದರೆ ಆಗುವ ಅನಿಷ್ಟಗಳು ಯಾವುವು? ಸಾಲ ತಪ್ಪಿಸಲು ಏನು ಮಾಡೋಣ? ಕುಟುಂಬದ ಉಳಿತಾಯ ಮಾತ್ರ ಸಾಲದು. ಸಮುದಾಯ ಉಳಿತಾಯದ ಅವಶ್ಯಕತೆ. ಎಲ್ಲರ ನಿಧಿಯನ್ನು ಹೇಗೆ ಕೂಡಿಸೋಣ?

2. **ಅಕ್ಷರ ಜ್ಞಾನ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರಗಳನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಇಲ್ಲಿ ಸ್ವರಾಕ್ಷರಗಳನ್ನು ಹೊಸದಾಗಿ ಕಲಿಯಬೇಕೆಂದಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

3. **ಶಬ್ದರಚನೆ ಮತ್ತು ವಾಕ್ಯರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-46 ಪುಟಗಳನ್ನು ನೋಡಿ. ನಾಲ್ಕನೇ ಸೂತ್ರದ ಹೊಸ ಅಕ್ಷರಗಳೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ನಂತರ ಸಾಧ್ಯವಿದ್ದರೆ ವಾಕ್ಯಗಳನ್ನು ಜೋಡಿಸಲಾಗುವುದು. ವಯಸ್ಕರ ಜೋಡಿಸಿದ ಪದಗಳನ್ನು ಒಂದೆಡೆ ಬರೆದಿಡಬೇಕು.

4. **ಸಂಖ್ಯಾಜ್ಞಾನ** : ಒಂದನೇ ಸೂತ್ರದಲ್ಲಿಯ ವಿಧಾನದಲ್ಲೇ `4' ಅಂಕಿಯನ್ನು ಕಲಿಯುವುದು. '4' ಅಂಕಿಗೆ ಸಂಬಂಧ ಪಟ್ಟ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು:


1 + 1 + 1 + 1 =	4 – 1 =
3 + 1 =	4 – 2 =
2 + 2 =	4 – 4 =
4 + 0 =	4 – 0 =

1								
1								
1	3 +	2+	4+	4–	4–	4–	4–	4–
1	1	2	0	1	2	3	4	0
___	___	___	___	___	___	___	___	___

5. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

1) ಉಕ್ತಲೇಖನ : ಮಕ್ಕಳ ಹಿಂದೆ ರಚಿಸಿದ ಪದಗಳನ್ನು ಓದಿ ಹೇಳಿ ಅವನ್ನು ಮಕ್ಕಳು ಪುಸ್ತಕದಲ್ಲಿ ಬರೆಯುವಂತೆ ತಿಳಿಸಿ. ಕೊನೆಯಲ್ಲಿ ಅವರು ಬರೆದ ಪದಗಳಲ್ಲಿ ಸರಿ, ತಪ್ಪುಗಳನ್ನು ಗಮನಿಸಿ.

2) ಕೂಡಿಸುವ ಆಟ:



ಊದುಬತ್ತಿಯ ಕೊಳವೆಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಜೋಡಿಸಿಕೊಳ್ಳಿ. ಇಬ್ಬರು ವಿದ್ಯಾರ್ಥಿಗಳನ್ನು ಕರೆದು ಒಬ್ಬನಿಗೆ ಎರಡು ಮತ್ತೊಬ್ಬನಿಗೆ ಎರಡು ಗೋಲಿಗಳನ್ನು ತೆಗೆದುಕೊಳ್ಳುವಂತೆ ಹೇಳಿ. ಇಬ್ಬರೂ ವಿದ್ಯಾರ್ಥಿಗಳು ತಮ್ಮಲ್ಲಿರುವ ಗೋಲಿಗಳ ಅಂಕಿಯನ್ನು ಕಪ್ಪು ಹಲಗೆ ಮೇಲೆ ಒಂದರ ಕೆಳಗೆ ಒಂದರಂತೆ ಬರೆಯಲಿ. ಗೋಲಿಗಳನ್ನು ಒಬ್ಬನಿಗೆ ಒಂದು ಕೊಳವೆಯಲ್ಲಿ ಮತ್ತೊಬ್ಬನಿಗೆ ಇನ್ನೊಂದು ಕೊಳವೆಯಲ್ಲಿ ಹಾಕಲಿಕ್ಕೆ ತಿಳಿಸಿ. ಮೂರನೇ ವಿದ್ಯಾರ್ಥಿಯನ್ನು ಕರೆದು ಕೆಳಗೆ ಬಿದ್ದ ಗೋಲಿಗಳನ್ನು ಎಣಿಸಿ, ಮೊತ್ತವನ್ನು ಕಪ್ಪು ಹಲಗೆ ಮೇಲೆ ಮೊದಲ ಎರಡು ಅಂಕಿಗಳ ಕೆಳಗೆ ಬರೆಯಲಿಕ್ಕೆ ಹೇಳಿ.

6. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆ

1) ಮೊದಲ ಭಾಗಕ್ಕಿರುವ ಸಂಬಂಧದಂತೆ 2ನೇ ಭಾಗದ ಸಂಬಂಧವನ್ನು ಅರ್ಥಮಾಡಿ ಖಾಲಿ ಜಾಗ ತುಂಬಿ. ಮಾದರಿ : ಸಿ : ಲಿ :: ಸೋ : _____ (ಲೋ)

a. ಸ : ಲ :: ಸಂ : ______ d. ಲೀ : ಲ :: ಸೀ : ______

b. ಸೈ : ಲೈ :: ______ : ಲು e. ಲೋ: ಲ :: _____ : ಸ

c. ಸಾ : ಲಾ :: ಸಃ : _____ e. ಲೌ: ಲೈ:: _____ : ಸೈ

6. **ಹೆಚ್ಚುವರಿ ಚಟುವಟಿಕೆಗಳು**

1) ಸಾಧ್ಯವಿದ್ದರೆ ಮಕ್ಕಳು ಒಂದು ಬ್ಯಾಂಕನ್ನು ಭೇಟಿಯಾಗಿ ಬ್ಯಾಂಕಲ್ಲಿ ಆಗುವ ವ್ಯವಹಾರಗಳನ್ನು ಠೇವಣಿ ಇಡುವುದು, ಸಾಲ ಕೊಡುವುದು ಮುಂತಾದುವನ್ನು ತಿಳಿದು ಗುಂಪಿಗೆ ತಿಳಿಸುವುದು.

2) ಬ್ಯಾಂಕಿನಲ್ಲಿ ಕೊಡುವ ಸಾಲದ ಬಡ್ಡಿ ಮತ್ತು ಊರಿನಲ್ಲಿ ಕೊಡುವ ಸಾಲದ ಬಡ್ಡಿ ಬಗ್ಗೆ ಚರ್ಚೆ ಮಾಡುವುದು.

ಪ್ರೇರಕರಿಗೆ ಸೂಚನೆಗಳು 5



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಹರಿಕಥೆ: ಹರಿಕಥೆಗಳನ್ನು ಏತಕ್ಕೋಸ್ಕರ ಏರ್ಪಡಿಸುತ್ತಾರೆ? ಹಳ್ಳಿ ಜನರ ಇತರ ಮನೋರಂಜನೆಯ ಸಾಧನಗಳಾವುವು? ಹಳ್ಳಿಯ ಸಂಸ್ಕೃತಿಗೆ ತಿರಸ್ಕಾರ; ಸುಶಿಕ್ಷಿತರ, ಪಟ್ಟಣದ ಸಂಸ್ಕೃತಿಗೆ ಪುರಸ್ಕಾರ. ನಮ್ಮ ಸಂಸ್ಕೃತಿಯ ಬಗ್ಗೆ ಸ್ವಾಭಿಮಾನ ಹೇಗೆ ಹೆಚ್ಚಿಸಬಹುದು? ಹಳ್ಳಿಯ ಸಂಸ್ಕೃತಿಯನ್ನು ಕಾಪಾಡಲೂ ವೃದ್ಧಿಸಲೂ ಯಾವ್ಯಾವ ಕ್ರಮಗಳನ್ನು ಕೈಗೊಳ್ಳಬಹುದು?

2. **ಅಕ್ಷರಜ್ಞಾನ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಇಲ್ಲಿ ಸ್ವರಾಕ್ಷರಗಳನ್ನು ಹೊಸದಾಗಿ ಕಲಿಯಬೇಕೆಂದಿಲ್ಲ. ಅಕ್ಷರಪಟ 33 ನೇ ಪುಟದಲ್ಲಿದೆ.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. ಐದನೇ ಸೂತ್ರದಲ್ಲಿ ಕಲಿತ ಅಕ್ಷರದ ವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ರಚಿಸಿದ ಶಬ್ದಗಳನ್ನು ಪ್ರೇರಕನು ತನ್ನ ಪುಸ್ತಕದಲ್ಲಿ ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸಮಸ್ಯೆಯಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ರಚಿಸಿದ ವಾಕ್ಯಗಳನ್ನು ಪ್ರೇರಕನು ತನ್ನ ದಾಖಲು ಪುಸ್ತಕದಲ್ಲಿ ಬರೆದಿಡಬೇಕು.

5. **ಸಂಖ್ಯಾಜ್ಞಾನ** : ಒಂದನೇ ಸೂತ್ರದಲ್ಲಿಯ ಕ್ರಮವನ್ನು ಅನುಸರಿಸಿಯೇ '5' ಅಂಕಿಯನ್ನು ಕಲಿಯುವುದು.

– '5' ಅಂಕಿಗೆ ಸಂಬಂಧ ಪಟ್ಟ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು.

1 + 1 + 1 +1 + 1=	5 – 1 =	5 – 5 =
4 + 1 =	5 – 2 =	5 – 0 =
3 + 2 =	5 – 3 =	
5 + 0 =	5 – 4 =	

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆಗಳು.

1) ಒಂದು ಮಗುವನ್ನು ಕರೆದು ಒಂದು ಪದ ಬರೆದಿರುವ ಮಿಂಚು ಪಟ್ಟಿಯನ್ನು ಒಂದು ನಿಮಿಷ ಮಾತ್ರ ಅದಕ್ಕೆ ತೋರಿಸಿ. ಮಗು ತಕ್ಷಣ ಕಪ್ಪು ಹಲಗೆ ಹತ್ತಿರ ಹೋಗಿ ಆ ಪದ ಬರೆಯಬೇಕು ಮತ್ತು ಓದಬೇಕು. ಬೇರೆ ಬೇರೆ ಮಕ್ಕಳಿಗೆ ಬೇರೆ ಬೇರೆ ಪದಗಳನ್ನು ತೋರಿಸಿ ಆಟ ಮುಂದುವರಿಸುವುದು.

2) ಇಬ್ಬರು ವಿದ್ಯಾರ್ಥಿಗಳನ್ನು ಕರೆಯಿರಿ. ಒಬ್ಬನಿಗೆ ಒಂದು ರುಪಾಯಿಯ 5 ನಾಣ್ಯಗಳನ್ನು ಕೊಟ್ಟು ಎಣಿಸಲಿಕ್ಕೆ ತಿಳಿಸಿ ಮೊತ್ತವನ್ನು ಕಪ್ಪು ಹಲಗೆ ಮೇಲೆ ಬರೆಯಲಿಕ್ಕೆ ಹೇಳಿ. ನಂತರ ತನ್ನ 5 ನಾಣ್ಯಗಳಿಂತ 2 ನಾಣ್ಯಗಳನ್ನು 2ನೇ ವಿದ್ಯಾರ್ಥಿಗೆ ಕೊಡಲು ಹೇಳಿ. 2ನೇ ವಿದ್ಯಾರ್ಥಿ ಅವನ್ನು ಲೆಕ್ಕಮಾಡಿ ಮೊತ್ತವನ್ನು ಕಪ್ಪು ಹಲಗೆ ಮೇಲೆ 5ರ ಕೆಳಗೆ ಬರೆಯಲ್ಲಿಕ್ಕೆ ತಿಳಿಸಿ. 3ನೇ ವಿದ್ಯಾರ್ಥಿಯನ್ನು ಕರೆದು 1ನೇ ವಿದ್ಯಾರ್ಥಿಯ ಕಯ್ಯಲ್ಲಿ ಉಳಿದ ನಾಣ್ಯಗಳನ್ನು ಲೆಕ್ಕಮಾಡಿ ಕಪ್ಪು ಹಲಗೆ ಮೇಲಿನ 2 ಅಂಕಿಗಳ ಕೆಳಗೆ ಬರೆಯಿಲ್ಲಿಕ್ಕೆ ಹೇಳಿ.

(1) (1) (1) (1) (1) – (1) (1) = (1) (1) (1)

5 - 2 = 3

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆ

1) ಹೊಂದಿಸಿ ಬರೆಯಿರಿ :

a	b
0	2
00000	3
***	5
□□	1

8. **ಹೆಚ್ಚುವರಿ ಚಟುವಟಿಕೆಗಳು** :

1) ಮಕ್ಕಳು ಹಳ್ಳಿಯ ಬೇರೆ ಬೇರೆ ಮನೋರಂಜನೆಯ ವಿಧಾನಗಳನ್ನು ತಿಳಿದು ಗುಂಪಿಗೆ ಹೇಳುವುದು.

2) ಮಕ್ಕಳು ಹಳ್ಳಿಯಲ್ಲಿರುವ ಆಟ, ಕಲೆಗಳ ಬಗ್ಗೆ ತಿಳಿದು ಗುಂಪಿನಲ್ಲಿ ವಿವರಿಸುವುದು.

ಪ್ರೇರಕರಿಗೆ ಸೂಚನೆಗಳು 6



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ದೇವಸ್ಥಾನ: ದೇವರು, ಪೂಜೆ, ಹಬ್ಬ, ಜಾತ್ರೆ, ಹರಕೆಗಳು, ಆಚಾರಗಳು. ದೇವರಲ್ಲಿ ನಂಬಿಕೆ-ಅದರ ನಿಜ ಅರ್ಥ ಏನು? ದೇವರಿಗೆ ಪ್ರತ್ಯೇಕವಾಗಿ ಮಾಡುವ ಪೂಜೆ, ಹರಕೆ, ಜಾತ್ರೆಗಳ ಸಂದರ್ಭಗಳು: ಕಾಯಿಲೆ, ಮಳೆಯ ಅಭಾವ. ಬೇರೆ ಬೇರೆ ಬೇಡಿಕೆಗಳು... "ದೇವರು ಕೊಟ್ಟ ಜೋಳಿಗೆಯನ್ನು ಗೂಟಕ್ಕೆ ತಗಲಿ ಹಾಕಿದರೆ ಹೊಟ್ಟೆ ತುಂಬುತ್ತೋ?" ಮಂತ್ರಿಸಿದರೆ ಮಾವಿನಕಾಯಿ ಉದುರುವುದೇ?" ದೇವರಲ್ಲಿ ನಂಬಿಕೆ ಇಟ್ಟರೂ ಮಾನವನು ಬುದ್ಧಿ ಉಪಯೋಗಿಸಿ ಕೆಲಸ ಸಾಧನೆ ಮಾಡುವ ಅವಶ್ಯಕತೆ.

2. **ಅಕ್ಷರಜ್ಞಾನ** :ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

   ಒತ್ತಕ್ಷರಗಳು : ಒತ್ತಕ್ಷರಗಳ ಜ್ಞಾನವನ್ನು ಯಾವ ರೀತಿಯಲ್ಲಿ ಮೂಡಿಸಬೇಕು ಎಂಬುದನ್ನು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 46-47 ಪುಟಗಳಲ್ಲಿ ವಿವರಿಸಲಾಗಿದೆ.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. ಆರನೇ ಸೂತ್ರದಲ್ಲಿ ಕಲಿತ ಅಕ್ಷರದ ವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಕಂಡುಹಿಡಿದ ಪದಗಳನ್ನು ಪ್ರೇರಕನು ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರಗಳನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ಪೋಣಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡಬೇಕು.

5. **ಸಂಖ್ಯಾಜ್ಞಾನ** : ಒಂದನೇ ಸೂತ್ರದಲ್ಲಿ ವಿವರಿಸದ ಕ್ರಮದಿಂದಲೇ '6' ಅಂಕಿಯ ಜ್ಞಾನ.

   – '6' ಅಂಕಿಗೆ ಒಳಪಟ್ಟ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು.

1 +1 + 1 + 1 +1 + 1=	3 + 3 =	6 – 1 =	6 – 4 =	6 – 0 =
5 + 1 =	6 + 0 =	6 – 2 =	6 – 5 =	
4 + 2 =		6 – 3 =	6 – 6 =	

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆ

1) ಹೊಂದಿಸಿ ಬರೆಯಿರಿ

A	B
a) ದ	i) ವೆ
b) ವ	ii) ನಿ
c) ತ	iii) ದಿ
d) ನ	iv) ತಾ

8. **ಹೆಚ್ಚುವರಿ ಚಟುವಟಿಕೆಗಳು**

(1) ಜನರು ಬಳಸುವ ಗಾದೆ ಮಾತುಗಳನ್ನು ಮಕ್ಕಳು ಒಟ್ಟು ಕೂಡಿಸಿ ಗುಂಪಲ್ಲಿ ಹಂಚುವುದು.

(2) ಜನರು ಬಳಸುವ ಒಗಟುಗಳನ್ನು ಮಕ್ಕಳು ಗುಂಪಲ್ಲಿ ಹೇಳಿ ಉತ್ತರ ಪಡೆಯುವುದು.

(12 ನೇ ಸಮಸ್ಯೆ ಪುಟ 38ರಿಂದ ಮುಂದುವರಿಸಲಾಗಿದೆ)

7. **ಮೌಲ್ಯಮಾಪನ** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

ಕೆಳಕಂಡ ಸಂಖ್ಯೆಗಳಲ್ಲಿ ಅಡಿಗೆರೆ ಎಳೆದಿರುವ ಅಂಕಿಗಳ ಸ್ಥಾನ ಬೆಲೆ ಸೂಚಿಸಿ:

6<u>3</u>5; <u>7</u>48; 39<u>6</u>

8. **ಹೆಚ್ಚುವರಿ ಚಟುವಟಿಕೆಗಳು :**

1. ಮಕ್ಕಳನ್ನು ಶಾಲೆಯಿಂದ ಹೊರಗೆ ಗಿಡಗಳು ಹೆಚ್ಚಾಗಿರುವ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬೆಳೆಯುವ ವಿವಿಧ ಸಸ್ಯಗಳನ್ನು ವೀಕ್ಷಿಸಿ ಗುಂಪಿಗೆ ತಿಳಿಸಲು ಹೇಳುವುದು.
2. ಕಾಡಿನಲ್ಲಿ ಬೆಳೆಯುವ ಗಿಡ ಮರಗಳ ಪಟ್ಟಿ ಮಾಡುವುದು.
3. ಕಾಡಿನಲ್ಲಿ ಇರುವ ಪ್ರಾಣಿ ಪಕ್ಷಿಗಳ ಪಟ್ಟಿ ಮಾಡುವುದು.
4. ಒಂದು ಗಿಡವನ್ನು ತೆಗೆದು ಅದರ ಭಾಗಗಳನ್ನು ಹೆಸರಿಸುವುದು.
5. ಸಸ್ಯಗಳಿಂದಾಗುವ ಪ್ರಯೋಜನಗಳನ್ನು ಪಟ್ಟಿ ಮಾಡುವುದು
6. ಸಾದ್ಯವಿದ್ದರೆ ಅರಣ್ಯಾಧಿಕಾರಿಗಳನ್ನು ಭೇಟಿಯಾಗಿ ಅರಣ್ಯ ಕಾಪಾಡಲು ಮತ್ತು ಬೆಳೆಸಲು ಇರುವ ಯೋಜನೆಗಳನ್ನು ತಿಳಿದು ಗುಂಪಿಗೆ ವಿವರಿಸುವುದು.

ಪ್ರೇರಕರಿಗೆ ಸೂಚನೆಗಳು 7



1. ಅರಿವು: ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಮಹಿಳೆ: ಕುಟುಂಬದಲ್ಲಿ ಮಹಿಳೆಯ ಪಾತ್ರ; ಮಹಿಳೆಗೆ ಸಮಾಜ ಕೊಡುವ ಸ್ಥಾನ. ಮಹಿಳೆಯ ಕೊಡುಗೆಗೂ ಅವಳಿಗೆ ಸಿಗುವ ಪುರಸ್ಕಾರಕ್ಕೂ ಇರುವ ಅಂತರ. ಬೇರೆ ಬೇರೆ ನಿದರ್ಶನಗಳು: ಕೆಲಸದಲ್ಲಿ ಗಂಡಿಗಿಂತ ಅವಳಿಗೆ ಕಡಿಮೆ ಕೂಲಿ, ಸಮಾಜ ನಿರ್ವಹಿಸುವಲ್ಲಿ ಅವಳಿಗೆ ಹಕ್ಕಿಲ್ಲ... ಈ ಪರಿಸ್ಥಿತಿಯನ್ನು ಬದಲಾಯಿಸಬಹುದೋ? ಏನು ಮಾಡಬಹುದು?

2. **ಅಕ್ಷರಜ್ಞಾನ** : ಪುಟ 5-6 ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರಗಳನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಇಲ್ಲಿ ಸ್ವರಾಕ್ಷರಗಳನ್ನು ಹೊಸದಾಗಿ ಕಲಿಯಬೇಕೆಂದಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. ಏಳನೇ ಸೂತ್ರದ ಹೊಸ ಅಕ್ಷರಗಳೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಜೋಡಿಸಿದ ಪದಗಳನ್ನು ಪ್ರೇರಕನು ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಗಮನಿಸುವುದು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ಪೋಣಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡಬೇಕು.

5. **ಸಂಖ್ಯಾಜ್ಞಾನ** : ಒಂದನೇ ಸೂತ್ರದಲ್ಲಿಯ ಕ್ರಮವನ್ನನುಸರಿಸಿ '7' ಅಂಕಿಯನ್ನು ಕಲಿಯುವುದು.

'7' ಅಂಕಿಗೆ ಸೀಮಿತವಾದ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು.

1+ 1+ 1 + 1 + 1 +1 + 1=	7 – 1 =	7 – 6 =
6 + 1 =	7 – 2 =	7 – 7 =
5 + 2 =	7 – 3 =	7 – 0 =
4 + 3 =	7 – 5 =	
7 + 0 =	7 – 6 =	

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆ:

1) ರಮೇಶ 1 ಕಿ.ಮೀ. ಕಾಲ್ನಡಿಗೆಯಲ್ಲಿ , 2 ಕಿ.ಮೀ. ಸ್ಕೂಟರ್ ನಲ್ಲಿ ಮತ್ತು 4 ಕಿ.ಮೀ. ಬಸ್ಸಿನಲ್ಲಿ ಪ್ರಯಾಣ ಮಾಡಿದರೆ ರಮೇಶನು ಪ್ರಯಾಣ ಮಾಡಿದ ಒಟ್ಟು ದೂರ ಎಷ್ಟು?

8. ಹೆಚ್ಚುವರಿ ಚಟುವಟಿಕೆಗಳು

1) ಮಕ್ಕಳು ತಮ್ಮ ಊರಲ್ಲಿ ಬೇರೆ ಬೇರೆ ಕೆಲಸಗಳಲ್ಲಿ ಎಷ್ಟು ಮಂದಿ ಗಂಡಸರು ಎಷ್ಟು ಮಂದಿ ಹೆಂಗಸರಿದ್ದಾರೆ ಎಂದು ತಿಳಿದು ಗುಂಪಿಗೆ ವಿವರಿಸುವುದು.

2) ಊರಲ್ಲಿ ಹೆಚ್ಚು ಓದಿರುವ ಗಂಡಸರನ್ನೂ ಹೆಚ್ಚು ಓದಿರುವ ಹೆಂಗಸರನ್ನೂ ಮಕ್ಕಳು ಪಟ್ಟಿ ಮಾಡುವುದು.

3) ಊರಿನ ಗಂಡು ಮಕ್ಕಳಲ್ಲಿ ಮತ್ತು ಹೆಣ್ಣು ಮಕ್ಕಳಲ್ಲಿ ಒಟ್ಟು ಎಷ್ಟು ಮಂದಿ ಶಾಲೆಗೆ ಹೋಗುತ್ತಾರೆ ಎಂದು ಮಕ್ಕಳು ತಿಳಿದುಕೊಂಡು ಚರ್ಚಿಸುವುದು.

(16 ನೇ ಸಮಸ್ಯೆಯ ಪುಟ 46ರಿಂದ ಮುಂದುವರಿಸಲಾಗಿದೆ)

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

1) ಭಿನ್ನರಾಶಿಗೆ ಅಭ್ಯಾಸಗಳು : ಒಂದು ಹಾಳೆಯನ್ನು 4 ಸಮಭಾಗ ಮಾಡುವುದು ಅದರ ಒಂದು ಭಾಗ ಎತ್ತಿ ಕೊಳ್ಳುವುದು.

2) ದಶಮಾಂಶಕ್ಕೆ ಅಭ್ಯಾಸಗಳು.

3) ಭಿನ್ನರಾಶಿಯನ್ನು ದಶಮಾಂಶಕ್ಕೆ, ದಶಮಾಂಶವನ್ನು ಭಿನ್ನರಾಶಿಗೆ ಪರಿವರ್ತಿಸುವ ಅಭ್ಯಾಸಗಳು.

4) ಭಿನ್ನರಾಶಿಯನ್ನು ಶೇಕಡಾಕ್ಕೆ, ಶೇಕಡಾವನ್ನು ಭಿನ್ನರಾಶಿಗೆ ಪರಿವರ್ತಿಸುವ ಅಭ್ಯಾಸಗಳು.

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆಗಳು:

1) ಒಂದು ರೊಟ್ಟಿಯಲ್ಲಿ ಅರ್ಧಭಾಗ ತಿಂದರೆ ಉಳಿದ ಭಾಗ ಎಷ್ಟು?

2) ಒಂದು ಹಾಳೆಯನ್ನು 10 ಭಾಗ ಮಾಡಿ 7 ಭಾಗಗಳಿಗೆ ಬಣ್ಣ ಹಾಕಿದರೆ ಎಷ್ಟು ಭಾಗಗಳಿಗೆ ಬಣ್ಣ ಹಾಕಿದಂತಾಯಿತು?

3) ನಾನು 100 ರೂಪಾಯಿಗಳಲ್ಲಿ 5 ರೂಪಾಯಿಗಳನ್ನು ದಾನಮಾಡಿದರೆ ನನ್ನಲ್ಲಿಯ ಶೇಕಡಾ ಎಷ್ಟು ಹಣವನ್ನು ದಾನಮಾಡಿದಂತಾಯಿತು?


4) ಹೊಂದಿಸಿ ಬರೆಯಿರಿ:

A	B
a 40%	i 90/100
b 37%	ii 40/100
c 90%	iii 55/100
d 55%	iv 37/100

8. **ಹೆಚ್ಚುವರಿ ಚಟುವಟಿಕೆಗಳು:**

ಮಕ್ಕಳು ಉರಲ್ಲಿರುವ ಬೇರೆ ಬೇರೆ ಕಸಬುದಾರರನ್ನು (ಕೂಲಿಯಾಳು ರೈತ, ಬಡಗಿ, ಕಮ್ಮಾರ, ಚಮ್ಮಾರ ಇತ್ಯಾದಿ) ಭೇಟಿಮಾಡಿ ಅವರ ಕೌಶಲ್ಯ ಮತ್ತು ಅನುಭವಗಳನ್ನು ತಿಳಿದು ಗುಂಪಲ್ಲಿ ವಿವರಿಸುವುದು.

ಪ್ರೇರಕರಿಗೆ ಸೂಚನೆಗಳು 8



1. ಅರಿವು: ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಭೂಮಿ : ಯಾರ್‍ಯಾರಿಗೆ ಎಷ್ಟೆಷ್ಟು ಭೂಮಿ ಇದೆ? ಭೂಮಿಯ ನಿಜವಾದ ಒಡೆತನ ಯಾರದ್ದು? ದೇಶದ ಸಂಪನ್ಮೂಲಗಳ ಬಳಕೆ: ಭೂ-ಸುಧಾರಣೆಗಳ ಮುಖ್ಯ ನೀತಿ ಏನು? ಅವು ಜಾರಿಗೊಂಡಿರುವ ರೀತಿ. ನಮ್ಮ ಪ್ರದೇಶದಲ್ಲಿ ಆಗುವ ಅನ್ಯಾಯಗಳು ಅವನ್ನು ಯಾವ ರೀತಿಯಲ್ಲಿ ತಡೆಹಿಡಿಯಬಹುದು?

2. **ಅಕ್ಷರಜ್ಞಾನ :** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರಮಾತ್ರ ಕಲಿಯಬೇಕು.

3. **ಶಬ್ದರಚನೆ :** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. ಎಂಟನೇ ಸೂತ್ರದಲ್ಲಿ ಕಲಿತ ಅಕ್ಷರದೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ, ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಕಂಡುಹಿಡಿದ ಶಬ್ದಗಳನ್ನು ಪ್ರೇರಕನು ಬರೆದಿಡಬೇಕು.

4. **ವಾಕ್ಯರಚನೆ :** ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ರಚಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡಬೇಕು.

5. **ಸಂಖ್ಯಾಜ್ಞಾನ :** ಒಂದನೇ ಸೂತ್ರದಲ್ಲಿ ವಿವರಿಸಿದ ಕ್ರಮದಲ್ಲೇ '8' ಅಂಕಿಯನ್ನು ಕಲಿಯುವುದು.

   – '8' ಅಂಕಿಗೆ ಸಂಬಂಧಪಟ್ಟ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು.

1+ 1+ 1+ 1 + 1 + 1 +1 + 1=	8 – 1 =	8 – 7 =
7 + 1 =	8 – 2 =	8 – 8 =
6 + 2 =	8 – 3 =	8 – 0 =
5 + 3 =	8 – 4 =	
4 + 4 =	8 – 5 =	
8 + 0 =	8 – 6 =	

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳಂತೆ.

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳಂತೆ.

8. **ಹೆಚ್ಚುವರಿ ಚಟುವಟಿಕೆಗಳು** :

1) ಮಕ್ಕಳು ಉರಿನಲ್ಲಿರುವ ಬೇರೆ ಬೇರೆ ವಿಧದ ಮಣ್ಣಿನ ಅಥವಾ ಭೂಮಿಯ ಬಗ್ಗೆ ಚರ್ಚೆ ಮಾಡುವುದು.
2) ಭೂಮಿಯ ಫಲವತ್ತೆತೆಗೆ ಕಾರಣಗಳನ್ನು ವಿಸ್ತರಣಾಧಿಕಾರಿಗಳಿಂದ ತಿಳಿದು ಮಕ್ಕಳು ಗುಂಪಿಗೆ ಹೇಳುವುದು.
3) ಬೇರೆ ಬೇರೆ ಭೂಮಿಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೆಳೆಯುವ ಬೆಳೆಗಳನ್ನು ಹೆಸರಿಸುವುದು.
4) ಭೂಮಿ, ಚಂದ್ರ, ಗೃಹಗಳು, ನಕ್ಷತ್ರಗಳು, ಆಕಾಶಗಂಗೆ ಮುಂತಾದುವುಗಳ ಬಗ್ಗೆ ವಿವರ ತಿಳಿದು ಚರ್ಚಿಸುವುದು.

(17 ನೇ ಸಮಸ್ಯೆಯ ಪುಟ 48ರಿಂದ ಮುಂದುವರಿಸಲಾಗಿದೆ)

6. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆಗಳು:

1) ಅರ್ಕ ಚಿಹ್ನೆ ಇರುವ 3 ಪದಗಳನ್ನು ಬರೆಯಿರಿ.
2) ಖಾಲಿ ಬಿಟ್ಟ ಪದಗಳನ್ನು ಆವರಣದಲ್ಲಿರುವ ಸೂಕ್ತ ಪದಗಳಿಂದ ಭರ್ತಿ ಮಾಡಿ.

a. ______ ಐಶ್ವರ್ಯವಂತ. (ಅವನು, ಅದು)
b. ಅವನು ಶಾಲೆಗೆ______. (ಹೋದನು ಹೋದಳು)
c. ಅವಳು ಬಸ್ಸು ______ .(ಹತ್ತಿದಳು, ಹತ್ತಿದರು)
d. ನಾನು ಊರಿಗೆ________. (ಹೋಗುತ್ತೇವೆ, ಹೋಗುತ್ತೇನೆ)

3) ಗುಂಪಿಗೆ ಸೇರದ ಪದದ ಕೆಳಗೆ ಗೆರೆ ಹಾಕಿ. ಉದಾ.: ಆನೆ, ಹಲಿ, ಚಿರತೆ, ಎಮ್ಮೆ

a. ಬಾಗಿಲು, ಗೋಡೆ, ಕಿಟಕಿ, ನೇಗಿಲು,
b. ಕಣ್ಣು ಮೂಗು ಕಿವಿ, ಹೃದಯ
c. ಟೊಮೆಟೊ, ಮೂಲಂಗಿ, ತೆಂಗಿನಕಾಯಿ, ಕ್ಯಾರೆಟ್
d. ಹರ, ರವಿ, ರಾಮ, ಮಮತ,
e. ಟಿ.ವಿ. ರೇಡಿಯೋ ಟೇಪ ರೇಕಾರ್ಡ

4) ಖಾಲಿ ಬಿಟ್ಟ ಜಾಗವನ್ನು ಭರ್ತಿ ಮಾಡಿ.

a. 1 ಕಿ.ಮೀ.ಗೆ _____ ಮೀಟರುಗಳು. b. 1 ಅಡಿಗೆ_______ ಇಂಚುಗಳು.

c. 1 ಗಂಟೆಗೆ______ ನಿಮಿಷಗಳು. d. ಪ್ರತಿ 4 ವರ್ಷಕ್ಕೆ ______ ದಿವಸಗಳು.

(9 ನೇ ಸಮಸ್ಯೆಯ ಪುಟ 32ರಲ್ಲಿ ಮುಂದುವರಿದಿದೆ)

ಪ್ರೇರಕರಿಗೆ ಸೂಚನೆಗಳು 9



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಜೀತ : ಜೀತದಾಳುಗಳ ಪರಿಸ್ಥಿತಿ. ಜೀತಕ್ಕೆ ಹಿರಿಯರು ಏಕೆ ಮಕ್ಕಳನ್ನು ಕಳುಹಿಸುತ್ತಾರೆ? ಹಣದ ಅವಶ್ಯಕತೆಯಿಂದ. ಪರಿಹಾರವೇನು? ಉಳಿತಾಯ ಮಾಡುವುದು.

2. **ಅಕ್ಷರಜ್ಞಾನ :** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-35 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

3. **ಶಬ್ದರಚನೆ :** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. ಒಂಭತ್ತನೇ ಸೂತ್ರದಲ್ಲಿ ಕಲಿತ ಹೊಸ ಅಕ್ಷರದೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ, ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಕಂಡುಹಿಡಿದ ಶಬ್ದಗಳನ್ನು ಪ್ರೇರಕನು ಬರೆದಿಡಬೇಕು.

4. **ವಾಕ್ಯರಚನೆ :** ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ರಚಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡಬೇಕು.

5. **ಸಂಖ್ಯಾಜ್ಞಾನ :** ಒಂದನೇ ಸೂತ್ರದಲ್ಲಿ ವಿವರಿಸಿದ ಕ್ರಮದಲ್ಲೇ '9' ಅಂಕಿಯ ಜ್ಞಾನ.

'9' ಅಂಕಿಗೆ ಒಳಪಟ್ಟ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು.

1 +1+ 1+ 1+ 1 + 1 + 1 +1 + 1=	9 – 1 =	9 – 7 =
8 + 1 =	9 – 2 =	9 – 8 =
7 + 2 =	9 – 3 =	9 – 9 =
6 + 3 =	9 – 4 =	9 – 0 =
5 + 4 =	9 – 5 =	
9 + 0 =	9 – 6 =	

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳಂತೆ.

7. **ಮೌಲ್ಯಮಾಪನ** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

1) ಖಾಲಿ ಬಿಟ್ಟ ಸ್ಥಳಗಳನ್ನು ಆವರಣದಲ್ಲಿ ಕೊಟ್ಟಿರುವ ಅಕ್ಷರಗಳಿಂದ ತುಂಬಿರಿ:

a) ತಾ_____ (ಮ, ತ) d) _____ ನರು (ರ, ಜ)

b) ಜೀ_____ (ಗ, ತ) e) ತ _____ ರು (ಮ, ವ)

c) ಅಂತ _____ (ರ, ಳ)

8. **ಹೆಚ್ಚುವರಿ ಚಟುವಟಿಕೆಗಳು :**

1) ಮಕ್ಕಳು ಒಬ್ಬ ಜೀತದಾಳುವಿನ ಜೀವನ ಚರಿತ್ರೆಯನ್ನು ತಿಳಿದು ಗುಂಪಿಗೆ ವಿವರಿಸುವುದು.
2) ಜೀತಕ್ಕಿರುವುದರಿಂದ ಒಬ್ಬ ವ್ಯಕ್ತಿಯ ಮೇಲಾಗುವ ಪರಿಣಾಮದ ಬಗ್ಗೆ ಚರ್ಚೆ ಮಾಡುವುದು
3) ಬಾಲ ಜೀತ ಪದ್ಧತಿಯ ಅನಿಷ್ಟದ ಬಗ್ಗೆ ಮಕ್ಕಳು ಚರ್ಚೆ ಮಾಡುವುದು.
4) ಜೀತ ಪದ್ಧತಿ ರದ್ದತಿ ಕಾನೂನಿನ ಬಗ್ಗೆ ಮಕ್ಕಳು ತಿಳಿದುಕೊಂಡು ಗುಂಪಲ್ಲಿ ವಿವರಿಸುವುದು.

(17 ನೇ ಸಮಸ್ಯೆಯ ಪುಟ 48 ಮತ್ತು 8 ನೇ ಸಮಸ್ಯೆಯ 30 ನೇ ಪುಟದಿಂದ ಮುಂದುವರಿಸಲಾಗಿದೆ)

5) ರೇಖೆಗಳಲ್ಲಿ ಎಷ್ಟು ವಿಧ ? ಯಾವುವು? ತಲಾ 3 ಉದಾಹರಣೆ ಕೊಡಿ.

6) ಬೇರೆ ಬೇರೆ ಕೋನಗಳ ಉದಾಹರಣೆಗಳನ್ನು ಕೊಡಿ.

7) ಖಾಲಿ ಜಾಗ ತುಂಬಿರಿ

a. 90^0 ಗೆ ಸಮನವಿರುವ ಕೋನ b. ಲಘು ಕೋನದಲ್ಲಿ ಕೋನದ ಅಳತೆ 90^0 ಗಿಂತ_____.

c. □ ಇದು ಒಂದು______. d. ಇಟ್ಟಿಗೆ ಒಂದು _______.

7. **ಹೆಚ್ಚುವರಿ ಚಟುವಟಿಕೆಗಳು :**


1) ಒಂದು ಅಂಗಡಿಗೆ ಹೋಗಿ ಅಲ್ಲಿರುವ ತೂಕಗಳನ್ನು, ದ್ರವ್ಯ ಮಾಪನಗಳನ್ನು ಅರ್ಥ ಮಾಡಿಕೊಳ್ಳುವುದು.

2) ಒಬ್ಬ ಬಡಗಿ ಅಥವಾ ದರ್ಜಿಯ ಹತ್ತಿರ ಹೋಗಿ ಅವರಲ್ಲಿರುವ ಅಳತೆ ಕೋಲುಗಳನ್ನು ಪರೀಕ್ಷಿಸುವುದು.

3) ಒಂದು ಕ್ಯಾಲೆಂಡರನ್ನು ಬಳಸಿ ದಿನ ವಾರ, ವರ್ಷಗಳನ್ನು ತಿಳಿದುಕೊಳ್ಳುವುದು.

4) ಒಂದು ಗಡಿಯಾರವನ್ನು ನೋಡಿ ಅರ್ಥ ಮಾಡಿಕೊಳ್ಳುವುದು.

ಪ್ರೇರಕರಿಗೆ ಸೂಚನೆಗಳು 10



1. ಅರಿವು: ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಪ್ರಯಾಣ : ಜನಸಾಮಾನ್ಯರಿಗೆ ಸಾರಿಗೆಯ ಕೊರತೆ. ಶ್ರೀಮಂತರ ಅಧೀನದಲ್ಲಿರುವ ಸಾರಿಗೆ ಸಾಧನಗಳು. ಸಾರಿಗೆ ಅವಶ್ಯಕತೆ ಈಡೇರಿಸಲು ಏನು ಮಾಡಲು ಸಾಧ್ಯ? ಎಲ್ಲರಿಗೂ ಉಪಯೋಗವಾಗುವಂತಹ ಸಾರಿಗೆ ಮಾಧ್ಯಮ ತರಲು ಏನು ಮಾಡಲು ಸಾಧ್ಯ? ಇಡೀ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಉದ್ದಿಮೆಗಳಿಗೆ, ಪಟ್ಟಣಗಳಿಗೆ ಪ್ರಾಧಾನ್ಯತೆ. ಹಳ್ಳಿಗಳಿಗೆ, ಕೃಷಿಗೆ, ರೈತರಿಗೆ ಪ್ರಾಧಾನ್ಯತೆ ಇಲ್ಲ. ಏಕೆ ಈ ರೀತಿ?

2. **ಅಕ್ಷರಜ್ಞಾನ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರಮಾತ್ರ ಕಲಿಯಬೇಕು.

   ಒತ್ತಕ್ಷರಗಳು : ಆರನೇ ಸೂತ್ರದಲ್ಲಿ ಕಲಿತ ಒತ್ತಕ್ಷರದ ಮಾದರಿಗಿಂತ ವಿಶಿಷ್ಟವಾದ ಒತ್ತಕ್ಷರಗಳ ಜ್ಞಾನವನ್ನು ಪಡೆಯುವ ರೀತಿಯನ್ನು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 47-48 ಪುಟಗಳಲ್ಲಿ ವಿವರಿಸಲಾಗಿದೆ.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. ಹತ್ತನೇ ಸೂತ್ರದಲ್ಲಿ ಕಲಿತ ಹೊಸ ಅಕ್ಷರದೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಜೋಡಿಸಿದ ಶಬ್ದಗಳನ್ನು ಪ್ರೇರಕನು ಒಂದೆಡೆ ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ಜೋಡಿಸಿದ ವಾಕ್ಯಗಳನ್ನು ಪ್ರೇರಕನು ತನ್ನ ಪುಸ್ತಕದಲ್ಲಿ ಬರೆದಿಡಬೇಕು.

5. **ಸಂಖ್ಯಾಜ್ಞಾನ** : ಒಂದನೇ ಸೂತ್ರದಲ್ಲಿ ವಿವರಿಸಿದ ಕ್ರಮವನ್ನು ಅನುಸರಿಸಿ '10' ಸಂಖ್ಯೆಯ ಅರಿವು.

   – ನಂತರ ಹತ್ತು ಮತ್ತು ಹತ್ತರ ಮೇಲಿನ ಸಂಖ್ಯೆಗಳನ್ನು ಬರೆಯುವಾಗ ಹತ್ತರ ಕೆಳಗಿನ ಅಂಕಿಗಳನ್ನೇ ಬಳಸಲಾಗುತ್ತದೆ ಎಂಬುದನ್ನು ವಯಸ್ಕರು ಕಂಡು ಹಿಡಿಯುವಂತೆ ಪ್ರೇರಕನು ಈ ಕೆಳಗಿನ ಕ್ರಮವನ್ನು ಅನುಸರಿಸಬಹುದು.

   ಪ್ರೇರಕ : '10' ಸಂಖ್ಯೆಯಲ್ಲಿ ನಾವು ಯಾವ ಯಾವ ಅಂಕಿಗಳನ್ನು ಕಾಣುತ್ತೇವೆ?"

   ವಯಸ್ಕ : "ಎರಡು : 1 ಮತ್ತು 0 (ಒಂದು ಮತ್ತು ಸೊನ್ನೆ)"

ಪ್ರೇರಕ : "ಬೇರೆ ಬೇರೆ ಬರೆಯುವಾಗ ಒಂದು ಮತ್ತು ಸೊನ್ನೆ ಬೆಲೆ ಇರುವ ಅಂಕಿಗಳಿಗೆ ಹತ್ತು ಬೆಲೆ ಬರಲು, ಒಂದು (1) ಮತ್ತು ಸೊನ್ನೆ (0) ಗಳನ್ನು ಯಾವ ರೀತಿಯಲ್ಲಿ ಬರೆಯಲಾಗಿದೆ"

ವಯಸ್ಕ : "ಒಂದು (1) ಮತ್ತು ಸೊನ್ನೆ (0)ಯನ್ನು ಒಟ್ಟಿಗೆ ಬರೆಯಲಾಗಿದೆ."

ಪ್ರೇರಕ : "ಸೊನ್ನೆ (0) ಯನ್ನು ಒಂದ (1) ರ ಬಲಬದಿಯಲ್ಲಿ ಬರೆದಿದೆಯೋ ಅಥವಾ ಎಡಬದಿಯಲ್ಲಿ?"

ವಯಸ್ಕ : "ಸೊನ್ನೆ (0) ಯನ್ನು ಒಂದ (1) ರ ಬಲಬದಿಯಲ್ಲಿ ಬರೆಯಲಾಗಿದೆ"

10 ಸಂಖ್ಯೆಗೆ ಒಳಪಟ್ಟ ಕೂಡಿಸುವ ಮತ್ತೆ ಕಳೆಯುವ ಲೆಕ್ಕಗಳು.

9 +	8 +	7 +	6 +	5 +	10 +
1	2	3	4	5	0
____	____	____	____	____	____

10 –	10 –	10 –	10 –	10 –	10 –	10 –	10 –	10 –	10 –	10 –
1	2	3	4	5	6	7	8	9	10	0
____	____	____	____	____	____	____	____	____	____	____

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳಂತೆ.

7. **ಮೌಲ್ಯಮಾಪನ** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

ವಾಕ್ಯಗಳನ್ನು ರಚಿಸಿ : ಉದಾ :

ಆತನ	ಹಣ
ಇವನ	ಭೂಮಿ
ಅವಳ	ಸಾಲ
ಇವಳ	ಕೂಲಿ

ಆತನ ಹಣ. ಆತನ ಭೂಮಿ. ಆತನ ಸಾಲ. ಆತನ ಕೂಲಿ.

ಇವನ ಹಣ. ಇವನ ಭೂಮಿ. ಇವನ ಸಾಲ. ಇವನ ಕೂಲಿ.


ಇತ್ಯಾದಿ

8. **ಹೆಚ್ಚುವರಿ ಚಟುವಟಿಕೆಗಳು :**

1) ಪ್ರಯಾಣಕ್ಕೆ ಬಳಸುವ ಬೇರೆ ಬೇರೆ ವಾಹನಗಳ ಪಟ್ಟಿ ಮಾಡುವುದು.

2) ಬೇರೆ ಬೇರೆ ವಾಹನಗಳು ಚಲಿಸುವ ವಿಧಾನಗಳನ್ನು ಮತ್ತು ಅವು ಬಳಸುವ ಮಾರ್ಗಗಳನ್ನು ಗುಂಪಿಗೆ ವಿವರಿಸುವುದು

ಪ್ರೇರಕರಿಗೆ ಸೂಚನೆಗಳು 11



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಚಟ: ಪ್ರಮುಖ ಚಟಗಳು-ಏಕೆ ಅವುಗಳ ಅಭ್ಯಾಸ? ಜೀವನದ ನೋವನ್ನು ಮರೆಮಾಡಲು ಪ್ರಯತ್ನ. ಜೀವನದಲ್ಲಿ ಸಾರ್ಥಕತೆ ಬರುವುದು ಹೇಗೆ?

2. ಅಕ್ಷರಜ್ಞಾನ : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. 11ನೇ ಸೂತ್ರದಲ್ಲಿ ಕಲಿತ ಹೊಸ ಅಕ್ಷರದೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಜೋಡಿಸಿದ ಶಬ್ದಗಳನ್ನು ಪ್ರೇರಕನು ಒಂದೆಡೆ ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ಜೋಡಿಸಿದ ವಾಕ್ಯಗಳನ್ನು ಪ್ರೇರಕನು ತನ್ನ ಪುಸ್ತಕದಲ್ಲಿ ಬರೆದಿಡಬೇಕು.

5. **ಸಂಖ್ಯಾಜ್ಞಾನ** : 11 ರಿಂದ 99 ರವರೆಗೆ ಸಂಖ್ಯೆಗಳನ್ನು ಕಲಿಯಲು ಈ ಕೆಳಗಿನ ಕ್ರಮವನ್ನು ಅನುಸರಿಸಬಹುದು.

ಪ್ರೇರಕ : ಹತ್ತಕ್ಕೆ ಒಂದು ಕೂಡಿಸಿದರೆ ಎಷ್ಟು ಆಗುತ್ತದೆ? ವಯಸ್ಕ : "ಹನ್ನೊಂದು"

$10 + 1 = 11$ ಅಥವಾ

$$\begin{array}{r} 10 + \\ 1 \\ \hline 11 \\ \hline \end{array}$$

ಪ್ರೇರಕ : "11" ಸಂಖ್ಯೆಯಲ್ಲಿ "ನಾವು" ಎರಡು ಸಾರಿ "1" ನ್ನು ಬರೆದರೂ ಆ ಎರಡು ಅಂಕಿಗಳ ಬೆಲೆಯಲ್ಲಿ ಏನಾದರೂ ವ್ಯತ್ಯಾಸ ಇದೆಯೆ?"

ವಯಸ್ಕ : "ಬಲ ಬದಿಯಲ್ಲಿ ಬರೆದ '1' ಖಾಲಿ ಒಂದನ್ನು ಸೂಚಿಸುತ್ತದೆ; ಎಡಬದಿಯಲ್ಲಿ ಬರೆದ '1' ಹತ್ತನ್ನು ಸೂಚಿಸುತ್ತದೆ"

ಪ್ರೇರಕ : "ಹೀಗೆಯೇ ಎರಡು ಅಂಕಿಗಳನ್ನು ಕೂಡಿಸಿ ಬರೆದರೆ ಬಲಬದಿಯ ಅಂಕಿ ಬಿಡಿ ಅಂಕಿ (ಏಕಸ್ಥಾನ) ಯನ್ನು ಎಡಬದಿಯ ಅಂಕಿ ಎಷ್ಟು ಹತ್ತುಗಳು (ದಶಸ್ಥಾನ) ಎಂಬುದನ್ನು ಸೂಚಿಸುತ್ತದೆ."

10 11 12 13 14 15 16 17 18 19

ಇದೇ ತರಹ 20 ರಿಂದ 29, 30 ರಿಂದ 39, 40 ರಿಂದ 49, 50 ರಿಂದ 59, 60 ರಿಂದ 69,

70 ರಿಂದ 79, 80 ರಿಂದ 89, 90 ರಿಂದ 99 ಇವುಗಳಲ್ಲಿ ಬರುವ ಸಂಖ್ಯೆಗಳನ್ನು ಸ್ಥಾನಬೆಲೆ ಗುರುತಿಸುವುದರ ಮೂಲಕ ಕಲಿತುಕೊಳ್ಳಬಹುದು.

99 ಸಂಖ್ಯೆಗೆ ಒಳಪಟ್ಟ ಕಳೆಯುವ ಮತ್ತು ಕೂಡಿಸುವ ಲೆಕ್ಕಗಳು. ಉದಾ:

12 +	26 +	50 +	92 +	45 +	8 +	61 +	17 +	38 +	76
37	71	38	4	7	83	24	74	54	15
___	___	___	___	___	___	___	___	___	___

99 –	85 –	45 –	97 –	75 –	68 –	90 –	38 –	73 –	54 –
22	20	34	61	8	19	45	26	65	28
___	___	___	___	___	___	___	___	___	___

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆಗಳು.

1) ಅಕ್ಷರಗಳನ್ನು ಅದಲು ಬದಲು ಮಾಡಿದಾಗಲೂ ಅರ್ಥಪೂರ್ಣವಾದ ಬೇರೆ ಪದ ಆಗುವ ಒಂದು ಪದದ ಅಕ್ಷರಗಳ ಮಿಂಚುಪಟ್ಟಿಗಳನ್ನು ತಯಾರಿಸಿ ಅಕ್ಷರಗಳನ್ನು ಅದಲು ಬದಲು ಮಾಡಿದಾಗ ಆಗುವ ಪದಗಳನ್ನು ಗುರುತಿಸುವುದು. ಉದಾ : [ಸ] [ರ] → [ಸರ] , [ರಸ]
ಅದೇ ರೀತಿ : [ಮ] [ರ]; [ನ] [ದಿ]; ಇತ್ಯಾದಿ

2) ಹತ್ತರ ಸಂಖ್ಯೆಗಳನ್ನು ಪಟ್ಟಿ ಮಾಡಿಸಿ ಬಿಡಿ ಸ್ಥಾನ ಮತ್ತು ದಶಸ್ಥಾನದಲ್ಲಿರುವ ಅಂಕಿಗಳನ್ನು ಗುರುತಿಸಿ ಅವುಗಳ ಬೆಲೆಯನ್ನು ಕಂಡುಹಿಡಿಯುವುದು

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆಗಳು:

1) ಖಾಲಿ ಜಾಗಗಳನ್ನು ತುಂಬಿರಿ :
26 ಸಂಖ್ಯೆಯ ಬಿಡಿ ಸ್ಥಾನದಲ್ಲಿ _____ ಅಂಕಿ ಇದೆ. ಹತ್ತರ ಸ್ಥಾನದಲ್ಲಿ _____ಅಂಕಿ ಅದೆ.
98 ಸಂಖ್ಯೆಯಲ್ಲಿ 8ರ ಸ್ಥಾನ ಬೆಲೆ _____ ಮತ್ತು 9ರ ಸ್ಥಾನ ಬೆಲೆ _____ ಆಗಿದೆ.

2) ಮಾದರಿಯಂತೆ ಬರೆಯಿರಿ : ಉದಾ: 24 = 2 ಹತ್ತುಗಳು ಮತ್ತು 4 ಬಿಡಿಗಳು.
ಅದೇ ರೀತಿ : 65 = ; 71 = ;82 = ; 49 = ; ಇತ್ಯಾದಿ.

3) ಖಾಲಿ ಮನೆಗಳನ್ನು ತುಂಬಿ : ಉದಾ : 16 = [1] ಹತ್ತು + [6] ಬಿಡಿ
ಅದೇ ರೀತಿ : 27 = [ ] ಹತ್ತು + [ ] ಬಿಡಿ ; 93 = [ ] ಹತ್ತು + [ ] ಬಿಡಿ

8. **ಹೆಚ್ಚುವರಿ ಚಟುವಟಿಕೆಗಳು** :

1) ಜನರಲ್ಲಿರುವ ಬೇರೆ ಬೇರೆ ತಟಗಳ ಪಟ್ಟಿಮಾಡಿ ಅವುಗಳಲ್ಲಿರುವ ಅನಿಷ್ಟಗಳನ್ನು ಗುಂಪಿಗೆ ವಿವರಿಸುವುದು.

2) ವೈದ್ಯರು ಅಥವಾ ಆರೋಗ್ಯ ಕಾರ್ಯಕರ್ತೆಯರನ್ನು ಭೇಟಿಯ ಮಾಡಿ ಮೌಲ್ಯಮಾಪನ ಮತ್ತು ಧೂಮಪಾನಗಳಿಂದ ದೇಹದಲ್ಲಾಗುವ ಕೆಟ್ಟ ಪರಿಣಾಮಗಳನ್ನು ಗುಂಪಿಗೆ ವಿವರಿಸುವುದು. 2 ವಾಕ್ಯಗಳನ್ನು ಮಾಡಿರಿ

ಪ್ರೇರಕರಿಗೆ ಸೂಚನೆಗಳು 12



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಕಾಡು : ಮಳೆಯ ಅಭಾವಕ್ಕೆ ಕಾರಣ ಏನು? ಕಾಡುಗಳು ಹೇಗೆ ನಾಶವಾದುವು? "ರುಕ್ಷಾ ಕಡಿದು ಭಿಕ್ಷಾ ಬೇಡುವ ಪರಿಸ್ಥಿತಿ ಬಂದಿದೆ ನಮಗೆ". ಸರಕಾರದ 'ಅರಣ್ಯನೀತಿ'. ಕಾಡು ಬೆಳೆಸಲು ಸರಾಕಾರದ ಯೋಜನೆಗಳು ಅವನ್ನು ಪುರಸ್ಕರಿಸಲು ನಾವೇನು ಮಾಡಬಹುದು? ನಾವೇ ಹೆಚ್ಚು ಹೆಚ್ಚಾಗಿ ಮರಗಳನ್ನು ಬೆಳೆಸಬಹುದೋ? ಪರಿಸರ ರಕ್ಷಣೆ.

2. **ಅಕ್ಷರಜ್ಞಾನ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. 12ನೇ ಸೂತ್ರದಲ್ಲಿ ಕಲಿತ ಹೊಸ ಅಕ್ಷರದೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಜೋಡಿಸಿದ ಶಬ್ದಗಳನ್ನು ಪ್ರೇರಕನು ತನ್ನ ಪುಸ್ತಕದಲ್ಲಿ ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ರಚಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡುತ್ತಾನೆ.

5. **ಸಂಖ್ಯಾಜ್ಞಾನ** : ನೂರನ್ನು (100)ನ್ನು ಬರೆಯಲು ಕಲಿಯುವುದು. ನಂತರ ನೂರರ ಮೇಲಿನ ಆದರೆ ಸಾವಿರದ ಒಳಗಿನ ಸಂಖ್ಯೆಗಳನ್ನು ಬರೆಯಲು ಕಲಿಯುವುದು.

ಪ್ರೇರಕ : "ತೊಂಬತ್ತೊಂಬತ್ತಕ್ಕೆ ಒಂದನ್ನು ಕೂಡಿಸಿದರೆ ಎಷ್ಟು ಆಗುತ್ತದೆ? ವಯಸ್ಕ : "ನೂರು"

$$99 + 1 = 100 \quad \text{ಅಥವಾ} \quad \begin{array}{r} 99\ + \\ 1 \\ \hline 100 \\ \hline \end{array}$$

ಪ್ರೇರಕ : ``100" ಸಂಖ್ಯೆಯಲ್ಲಿ ಎಷ್ಟು ಅಂಕಿಗಳಿವೆ?"

ವಯಸ್ಕ : "ಮೂರು. ಬಲ ತುದಿಯಿಂದ ಒಂದನೇ ಸ್ಥಾನದಲ್ಲಿ ಸೊನ್ನೆ; ಎರಡನೇ ಸ್ಥಾನದಲ್ಲಿ ಸೊನ್ನೆ; ಮತ್ತು ಮೂರನೇ ಸ್ಥಾನದಲ್ಲಿ ಒಂದು."

ಪ್ರೇರಕ : "ಈ ಮೂರು ಅಂಕಿಗಳು ಏನೇನು ಅರ್ಥ ಸೂಚಿಸುತ್ತವೆ?"

ವಯಸ್ಕ : "ಖಾಲಿ ಒಂದೇ ಅಂಕಿ ಇದ್ದರೆ ಅದು ಬಿಡಿ ಅಂಕಿ. ಎರಡು ಅಂಕಿಗಳು

ಒಟ್ಟಾಗಿ ಬಂದರೆ ಹತ್ತರ ಸಂಖ್ಯೆ ಸೂಚಿಸುತ್ತದೆ ಮತ್ತು ಮೂರು ಅಂಕಿಗಳು ಒಟ್ಟಾಗಿ ಬಂದರೆ ಅವು ನೂರರ ಸಂಖ್ಯೆಯನ್ನು ಸೂಚಿಸುತ್ತವೆ."

ಪ್ರೇರಕ : "ಹೀಗೆ ಹೆಚ್ಚು ಹೆಚ್ಚು ಅಂಕಿಗಳನ್ನು ಜೋಡಿಸಿದ ಹಾಗೆ ಎಡ ಬದಿಯಲ್ಲಿರುವ ಅಂಕಿಯ ಬೆಲೆ ಜಾಸ್ತಿ ಆಗುತ್ತಾ ಹೋಗುತ್ತದೆ."

100 101 102 103 104 105 106 107 108 109

ಇದೇ ಮಾದರಿಯಲ್ಲಿ 110 ರಿಂದ 119, 120 ರಿಂದ 129, 130 ರಿಂದ 139, 140 ರಿಂದ 149, 150 ರಿಂದ 159, 160 ರಿಂದ 169, 170 ರಿಂದ 179, 180 ರಿಂದ 189, 190 ರಿಂದ 199 ಸಂಖ್ಯೆಗಳಲ್ಲಿ ಕೆಲವನ್ನು ಬರೆದು ವಯಸ್ಕರಿಂದ ಅವುಗಳನ್ನು ಗುರುತಿಸಲಿಕ್ಕೆ ಹೇಳಬಹುದು.

ಇದೇ ರೀತಿ 200 ರಿಂದ 290, 300 ರಿಂದ 390, 400 ರಿಂದ 490, 500 ರಿಂದ 590, 600 ರಿಂದ 690, 700 ರಿಂದ 790, 800 ರಿಂದ 890 ಮತ್ತು 900 ರಿಂದ 990 ಸಂಖ್ಯೆಗಳಲ್ಲಿ ಕೆಲವನ್ನು ಬರೆದು ಅವುಗಳನ್ನು ವಯಸ್ಕರು ಗುರುತಿಸಲಿಕ್ಕೆ ನೋಡಿಕೊಳ್ಳಬಹುದು.

999 ಒಳಗೆ ಕೂಡಿಸುವ ಮತ್ತು ಕಳೆಯುವ ಲೆಕ್ಕಗಳು. ಉದಾ :

100 +	309 +	870 +	543 +	703 +	900 +	428 +	643 +
248	615	108	207	198	52	273	240
____	____	____	____	____	____	____	____
985 –	741 –	651 –	325 –	801 –	456 –	525 –	760 –
532	320	402	276	543	392	489	683
____	____	____	____	____	____	____	____

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆಗಳು.

1) ವಾಕ್ಯಮಾಡಿ :

ಈಗ	ಊಟದ	ಸಮಯ
	ಆಟದ	
ಆಗ	ಓಟದ	
	ರಜೆಯ	

ಈಗ ಊಟದ ಸಮಯ...
ಈಗ ಆಟದ ಸಮಯ....
ಆಗ ಊಟದ ಸಮಯ....

2) ಸ್ಥಾನಬೆಲೆ ಕೋಷ್ಟಕ :

ನೂರು	ಹತ್ತು	ಬಿಡಿ
2	5	6

2 ನೂರು + 5 ಹತ್ತು + 6 ಬಿಡಿ = 256

3. ಕ್ರಮವಾಗಿ 4" x 2", 3" x 2", 2" x 2" ಅಳತೆಯ ಮಿಂಚು ಪಟ್ಟಿಗಳನ್ನು ಕತ್ತರಿಸಿ ಬಲ ಬದಿಯಲ್ಲಿ 2 ರಂಧ್ರ ಮಾಡಿ ದೊಡ್ಡ ಪಟ್ಟಿಯಲ್ಲಿ ನೂರರ ಸಂಖ್ಯೆ, ಮಧ್ಯ ಗಾತ್ರದ ಪಟ್ಟಿಯಲ್ಲಿ ಹತ್ತರ ಸಂಖ್ಯೆ ಮತ್ತು ಚಿಕ್ಕ ಪಟ್ಟಿಯಲ್ಲಿ ಬಿಡಿ ಅಂಕಿ ಬರೆಯಿರಿ. ನಂತರ ದೊಡ್ಡ ಪಟ್ಟಿಯ ಮೇಲೆ ಮಧ್ಯದ ಪಟ್ಟಿ, ಅದರ ಮೇಲೆ ಚಿಕ್ಕ ಪಟ್ಟಿಯನ್ನಿಟ್ಟು ಎಲ್ಲಾ ಪಟ್ಟಿಗಳ ರಂಧ್ರಗಳನ್ನು ಕಟ್ಟಿ ಓದಿ. [7 0 0 ⁝] [5 0 ⁝] [6 ⁝] [7|5|6 ⁝]

(6ನೇ ಸಮಸ್ಯೆಯ 26ನೇ ಪುಟದಲ್ಲಿ ಮುಂದುವರಿಸಲಾಗಿದೆ)

ಪ್ರೇರಕರಿಗೆ ಸೂಚನೆಗಳು 13



1. ಅರಿವು: ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಶುಚಿತ್ವ : ಆರೋಗ್ಯ ಕೆಡಲು ಮುಖ್ಯ ಕಾರಣ ಏನು? ದೇಹವನ್ನು, ಬಳಸುವ ವಸ್ತುಗಳನ್ನು, ಮನೆಯನ್ನು, ಊರನ್ನು ಶುಚಿಯಾಗಿ ಇಡದಿರುವುದು. ಶುಚಿತ್ವಕ್ಕೂ ಬಡತನಕ್ಕೂ ಸಂಬಂಧ ಏನು?

2. **ಅಕ್ಷರಜ್ಞಾನ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. 13ನೇ ಸೂತ್ರದ ಹೊಸ ಅಕ್ಷರದೊಡನೆ ಇಷ್ಟರ ವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ರಚಿಸಿದ ಶಬ್ದಗಳನ್ನು ಪ್ರೇರಕನು ತನ್ನ ಪುಸ್ತಕದಲ್ಲಿ ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ಜೋಡಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡುತ್ತಾನೆ.

5. **ಸಂಖ್ಯಾಜ್ಞಾನ** : 12ನೇ ಸೂತ್ರದಲ್ಲಿ ಅನುಸರಿಸಿದ ಕ್ರಮವನ್ನೇ ಅನುಸರಿಸಿ ಸಾವಿರ, ದಶಸಾವಿರ, ಲಕ್ಷ, ದಶಲಕ್ಷ, ಕೋಟಿಗಳನ್ನು ಬರೆಯಲು ಕಲಿಯುವುದು.

1	ಒಂದೇ (ಏಕ) ಸ್ಥಾನ	1
10	ಬಲದಿಂದ ಎಡಕ್ಕೆ 2ನೇ ಸ್ಥಾನ ಹತ್ತು	10 ರಿಂದ 99
100	ಬಲದಿಂದ ಎಡಕ್ಕೆ 3ನೇ ಸ್ಥಾನ ನೂರು	100 ರಿಂದ 999
1,000	ಬಲದಿಂದ ಎಡಕ್ಕೆ 4ನೇ ಸ್ಥಾನ ಸಾವಿರ	1,000 ರಿಂದ 9,999
10,000	ಬಲದಿಂದ ಎಡಕ್ಕೆ 5ನೇ ಸ್ಥಾನ ದಶಸಾವಿರ	10,000 ರಿಂದ 99,999
1,00,000	ಬಲದಿಂದ ಎಡಕ್ಕೆ 6ನೇ ಸ್ಥಾನ ಲಕ್ಷ	1,00,000 ರಿಂದ 9,99,999
10,00,000	ಬಲದಿಂದ ಎಡಕ್ಕೆ 7ನೇ ಸ್ಥಾನ ದಶಲಕ್ಷ	10,00,000 ರಿಂದ 99,99,999
1,00,00,000	ಬಲದಿಂದ ಎಡಕ್ಕೆ 8ನೇ ಸ್ಥಾನ ಕೋಟಿ	1,00,00,000 ರಿಂದ 9,99,99,999

ಬೇರೆ ಬೇರೆ ಸಂಖ್ಯೆಗಳನ್ನು ಕೂಡಿಸುವುದು ಹಾಗೂ ಕಳೆಯುವುದು.

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

ಸ್ಥಾನಬೆಲೆ ಕೋಷ್ಟಕ:

ದಶಕೋಟಿ	ಕೋಟಿ	ದಶಲಕ್ಷ	ಲಕ್ಷ	ದಶಸಾವಿರ	ಸಾವಿರ	ನೂರು	ಹತ್ತು	ಬಿಡಿ
5	9	1	8	6	7	0	3	2

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆಗಳು:

1) ಕೆಳಗಿನವುಗಳಿಗೆ ಪ್ರಾಸ ಪದಗಳನ್ನು ಬರೆಯಿರಿ : ಉದಾ. : ರಾಮ-ಭೀಮ

ಅದೇ ರೀತಿ : ಸರ-☐, ರಥ- ☐ ಆಗ-☐, ಅಲ್ಲಿ-☐,ಅಗೋ-☐

2) ಸ್ಥಾನ ಬೆಲೆ ತಿಳಿಸಿ: 7835ರಲ್ಲಿ 8ರ ಸ್ಥಾನಬೆಲೆ________ ; 7ರ ಸ್ಥಾನಬೆಲೆ________.

3) 9631ರಲ್ಲಿ ನೂರರ ಸ್ಥಾನದಲ್ಲಿ ಮತ್ತು ಸಾವಿರ ಸ್ಥಾನದಲ್ಲಿ ಯಾವ ಅಂಕಿಗಳಿವೆ?

8. **ಹೆಚ್ಚುವರಿ ಚಟುವಟಚಿಕೆಗಳು:**

1) ಮಕ್ಕಳನ್ನು ಕೊಳಚೆಯಿಂದ ಕೂಡಿದ ಜಾಗಕ್ಕೆ ಕರೆದೊಯ್ದು ಅಲ್ಲಿಯ ಅಂಶಗಳನ್ನು ಗಮನಿಸಲು ತಿಳಿಸುವುದು.

2) ಕೊಳಚೆಯಿಂದ ಆರೋಗ್ಯದ ಮೇಲಾಗುವ ಪರಿಣಾಮಗಳನ್ನು ಮಕ್ಕಳು ಚರ್ಚಿಸುವುದು.

3) ಆರೋಗ್ಯ ಕಾರ್ಯಕರ್ತೆಯವರಿಂದ ಆರೋಗ್ಯ ಕಾಪಾಡುವ ಮತ್ತು ನೈರ್ಮಲ್ಯದ ನಿಯಮಗಳನ್ನು ಮಕ್ಕಳು ತಿಳಿದುಕೊಳ್ಳುವುದು (ಮನೆಯಲ್ಲಿ ಗಾಳಿ ಬೆಳಕು ಹಾಯುವುದು, ಮನೆ ಸುತ್ತಮುತ್ತಲೂ ಸ್ವಚ್ಛತೆ, ಚರಂಡಿ ನೀರು ಹರಿದು ಹೋಗುವ ವ್ಯವಸ್ಥೆ, ದಿವಸಾಗಲೂ ಸ್ನಾನ ಮಾಡುವ ಅವಶ್ಯಕತೆ, ಸಾರ್ವತ್ರಿಕ ಸ್ಥಳಗನ್ನು ಸ್ವಚ್ಛವಾಗಿಡುವುದು ನಿಗದಿತ ವೇಳೆಯಲ್ಲಿ ಊಟ ಮಾಡುವುದು, ತಿಂದ ನಂತರ ಮುಖ ತೊಳೆಯುವುದು, ಇತ್ಯಾದಿ).

ಪ್ರೇರಕರಿಗೆ ಸೂಚನೆಗಳು 14



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಔಷಧಿ : ಆರೋಗ್ಯ ಕೆಟ್ಟಾಗ ಏನು ಮಾಡಲು ಸಾಧ್ಯ? ಚಿಕ್ಕ ಮಕ್ಕಳನ್ನು ರೋಗದಿಂದ ಕಾಪಾಡಲು ಏನು ಮಾಡಬೇಕು? ದೇಶದ ಆರೋಗ್ಯವಕಾಶ ಯಾರ ಪಾಲಿಗೆ? ಪಾಶ್ಚಾತ್ಯ ಮದ್ದಿಗೂ ನಾಟಿ ಔಷಧಿಗೂ ಇರುವ ಅಂತರವೇನು? ನಮ್ಮಲ್ಲಿ ಗಿಡಮೂಲಿಕೆಗಳ ಮದ್ದನ್ನು ಬಳಸುತ್ತಾರಯೇ? ಅವನ್ನು ಇನ್ನೂ ಹೇಗೆ ವೃದ್ಧಿಪಡಿಸಬಹುದು?

2. **ಅಕ್ಷರಜ್ಞಾನ :** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳವಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಆದರೆ ಇಲ್ಲಿ ಸ್ವರಾಕ್ಷರಗಳ ವಿವೇಚನೆಯ ಅಗತ್ಯವಿಲ್ಲ. ಅರ್ಧಾಕ್ಷರ ಮಾತ್ರ ಕಲಿಯಬೇಕು.

3. **ಶಬ್ದರಚನೆ :** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. 14ನೇ ಸೂತ್ರದ ಹೊಸ ಅಕ್ಷರದೊಡನೆ ಇಷ್ಟರ ವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ರಚಿಸಿದ ಶಬ್ದಗಳನ್ನು ಪ್ರೇರಕನು ತನ್ನ ಪುಸ್ತಕದಲ್ಲಿ ಬರೆದಿಡಬೇಕು.

4. **ವಾಕ್ಯರಚನೆ :** ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಅನುಸರಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ಜೋಡಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡುತ್ತಾನೆ.

5. **ಗಣಿತ :** ಗುಣಾಕಾರವನ್ನು ಕಲಿಯುವುದು. ಕೆಳಗಿನ ಪ್ರಶ್ನೆಗಳನ್ನು ಹಾಗೆಯೇ ಕೇಳದೆ ಉದಾಹರಣೆಗಳ ಮೂಲಕ ಕೇಳುವುದು ಒಳ್ಳೆಯದು.

   ಪ್ರೇರಕ : "ಒಂದನ್ನು ಒಂದು ಸಾರಿ ಎಣಿಸಿದರೆ ಎಷ್ಟಾಗುತ್ತದೆ?"

   ವಯಸ್ಕ : "ಒಂದು"

   ಒಂದು ಗುಣಿಸು ಒಂದು ಅಂದರೆ ಒಂದು

   $1 \times 1 = 1$

   ಉದಾಹರಣೆಗಳ ಮೂಲಕ ಗಣಿತದ ಕಲ್ಪನೆಗಳನ್ನು ದೃಢೀಕರಿಸಬಹುದು.


   ಪ್ರೇರಕ : "ಕೃಷ್ಣಪ್ಪನ ಕೋಳಿ 20 ಮೊಟ್ಟೆ ಹಾಕಿತು. 1 ಮೊಟ್ಟೆಗೆ 1 ರುಪಾಯಿ ಆದರೆ 20 ಮೊಟ್ಟೆಗಳಿಗೆ ಎಷ್ಟು ರುಪಾಯಿ?

ಬೇರೆ ಬೇರೆ ಅಂಕಿಸಂಖ್ಯೆಗಳ ಗುಣಲಬ್ದ ಪಡೆಯಲು ಈ ಕೆಳಗಿನ ಕೋಷ್ಟಕ ಬಳಸಬಹುದು.

1	2	3	4	5	6	7	8	9	10
2	4	6	8	10	12	14	16	18	20
3	6	9	12	15	18	21	24	27	30
4	8	12	16	20	24	28	32	36	40
5	10	15	20	25	30	35	40	45	50
6	12	18	24	30	36	42	48	54	60
7	14	21	28	35	42	49	56	63	70
8	16	24	32	40	48	56	64	72	80
9	18	27	36	45	54	63	72	81	90
10	20	30	40	50	60	70	80	90	100

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆಗಳು.

1)  ಇಲ್ಲಿ 2-2 ಗೋಲಿಗಳ 5 ಗುಂಪುಗಳಿವೆ. ಒಟ್ಟಿಗೆ 10 ಗೋಲಿಗಳಾದುವು (2 x 5 =10).

2)  ಇಲ್ಲಿ 6-6 ಗೋಲಿಗಳ 3 ಗುಂಪುಗಳಿವೆ. ಒಟ್ಟಿಗೆ 18 ಗೋಲಿಗಳಾದುವು (6 x 3 =18).

3) ಗಣಿತದ ಕೋಷ್ಟಕ : ಮೇಲೆ ಕೊಟ್ಟಿರುವ ಕೋಷ್ಠಕ ಬಳಸಿ ಬೇರೆ ಬೇರೆ ಮಗ್ಗಿಗಳನ್ನು ಕಲಿಯುವುದು.

4) ಸಂಖ್ಯೆಗಳನ್ನು ಗುಣಿಸುವ ಅಭ್ಯಾಸ ಮಾಡುವುದು: ಉದಾ. 12 x 6 = ; 28 x 74=; 309 x 246.

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆಗಳು:

1) ಗುಣಿಸಿ : a) 4 x 5 = ☐ ; b) 9 x 6 = ☐ ; c) 8 x 3 = ☐

d) 24 x 2 = ☐ ; e) 32 x 12 = ☐ ; f) 309 x 125 = ☐

8. **ಹೆಚ್ಚುವರಿ ತಟುವಟಿಕೆಗಳು**

1) ಸಾಧ್ಯವಿದ್ದರೆ ಸಮೀಪದ ಆರೋಗ್ಯ ಕೇಂದ್ರಕ್ಕೆ ಹೋಗಿ ಅಲ್ಲಿಯ ರೋಗಿಗಳು ಮತ್ತು ವೈದ್ಯರು ಅವರಿಗೆ ನೀಡುವ ಚಿಕಿತ್ಸೆ ಬಗ್ಗೆ ತಿಳಿಯುವುದು.

2) ವೈದ್ಯರು ಅಥವಾ ಆರೋಗ್ಯ ಕಾರ್ಯಕರ್ತೆಯರಿಂದ ಪ್ರಥಮ ಚಿಕಿತ್ಸೆ ಬಗ್ಗೆ ತಿಳಿಯುವುದು.

3) ಬೇರ ಬೇರೆ ರೋಗಿಗಳಿಗೆ ಬಳಸುವ ಗಿಡ ಮೂಲಿಕೆಗಳನ್ನು ಊರ ಹಿರಿಯರಿಂದ ತಿಳಿದು ಕೊಂಡು ಗುಂಪಲ್ಲಿ ವಿವರಿಸುವುದು.

ಪ್ರೇರಕರಿಗೆ ಸೂಚನೆಗಳು 15



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಮೂಢನಂಬಿಕೆ : ಮೂಢನಂಬಿಕೆ, ಒಣ ಆಚಾರ, ಮಾಟ ಮಂತ್ರಗಳ ಸಮೃದ್ಧಿ. ನಂಬಿಕೆಯು ಮೂಢನಂಬಿಕೆ ಆಗುವುದು ಯಾವಾಗ? ತನ್ನ ಬುದ್ಧಿ ಬಿಟ್ಟು, ಶ್ರಮ ತ್ಯಜಿಸಿ ದೇವರನ್ನೇ ಅವಲಂಬಿಸಿದಾಗ ಮಾನವ ತನ್ನ ಮಾನವತ್ವ ಬಿಡುತ್ತಾನೆ. ತನ್ನ ಜವಾಬ್ದಾರಿಯಿಂದ ವಿಮುಖನಾಗುತ್ತಾನೆ. ಇಂತಹ ಮೂಢನಂಬಿಕೆಗಳನ್ನು ಬಿಡಲು ಏನು ಮಾಡಬೇಕು?

2. **ಅಕ್ಷರಜ್ಞಾನ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 41-44 ಪುಟಗಳನ್ನು ನೋಡಿ. ಸೂತ್ರದ ಶಬ್ದದಲ್ಲಿಯ ಹೊಸ ಅಕ್ಷರವನ್ನು ಕಲಿಯಲು ಮೊದಲನೇ ಸೂತ್ರದಲ್ಲಿ ಅಳಪಡಿಸಿದ ಕ್ರಮವನ್ನೇ ಅನುಸರಿಸಲಾಗುವುದು. ಇಲ್ಲಿ ಸ್ವರಾಕ್ಷರಗಳನ್ನು ಹೊಸದಾಗಿ ಕಲಿಯಬೇಕೆಂದಿಲ್ಲ. ಅರ್ಧಾಕ್ಷರಗಳನ್ನು ಮಾತ್ರ ಕಲಿಯಬೇಕು.

   ಮಹಾಪ್ರಾಣಗಳು: ಅಲ್ಪ ಪ್ರಾಣಕ್ಕೆ ಕೇವಲ 'ಬಾಲ' ಕೂಡಿಸಿ ಬರೆಯುವ ಮಹಾಪ್ರಾಣಗಳನ್ನು ಮತ್ತು ಉಳಿದ ಎಲ್ಲಾ ಮಹಾಪ್ರಾಣಗಳನ್ನು ಬರೆಯಲು ಕಲಿಯುವ ರೀತಿಯನ್ನು ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 49-50 ಪುಟಗಳನ್ನು ನೋಡಿ.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. 15 ನೇ ಸೂತ್ರದ ಹೊಸ ಅಕ್ಷರಗಳೊಡನೆ ಇಷ್ಟರವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಕಂಡುಹಿಡಿದ ಪದಗಳನ್ನು ಪ್ರೇರಕನು ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರವನ್ನು ಗಮನಿಸುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ರಚಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡಬೇಕು.

5. **ಗಣಿತ** : ಭಾಗಾಹಾರದ ಪರಿಚಯ: – ಉದಾಹರಣೆಗಳೊಂದಿಗೆ ಕೆಳಗಿನ ಪ್ರಶ್ನೆಗಳನ್ನು ಕೇಳಿದರೆ ಉತ್ತಮ.

   ಪ್ರೇರಕ : "ಒಂದರಿಂದ ಒಂದನ್ನು ಎಷ್ಟು ಸಾರಿ ತೆಗೆಯಬಹುದು." (ಒಂದು ಬಾಳೆಹಣ್ಣನ್ನು ಇಡಿಯಾಗಿ ಎಷ್ಟು ಮಂದಿಗೆ ಕೊಡಹುದು?)

   ವಯಸ್ಕರ : "ಒಂದು" (ಒಬ್ಬರಿಗೆ)

   ಒಂದು ಭಾಗಿಸು ಒಂದು ಅಂದರೆ ಒಂದು ಅಥವಾ $\frac{1}{1} = 1$

   $1 \div 1 = 1$

ಅಥವಾ 1) 1 (1
1
―
0
―

ಅದೇ ರೀತಿಯಲ್ಲಿ ಎರಡು ತೆಂಗಿನ ಕಾಯಿಗಳನ್ನು ಒಂದೊಂದಾಗಿ ಎಷ್ಟು ಮಂದಿಗೆ ಕೊಡಬಹುದು? (2 ÷ 1 = 2)

ನಾಲ್ಕು ಮಿಠಾಯಿಗಳನ್ನು ಎರಡೆರಡಾಗಿ ಎಷ್ಟು ಮಂದಿಗೆ ಹಂಚಬಹುದು? 4 ÷ 2 = 2

1 ÷ 1 =	2 ÷ 2 =	10 ÷ 2 =	14 ÷ 2 =	18 ÷ 2 =
2 ÷ 1 =	3 ÷ 3 =	10 ÷ 5 =	14 ÷ 7 =	18 ÷ 3 =
3 ÷ 1 =	4 ÷ 4 =	10 ÷ 2 =	15 ÷ 3 =	18 ÷ 4 =
4 ÷ 1 =	4 ÷ 2 =	12 ÷ 3 =	15 ÷ 5 =	18 ÷ 9 =
5 ÷ 1 =	5 ÷ 5 =	12 ÷ 4 =	16 ÷ 2 =	20 ÷ 2 =
6 ÷ 1 =	6 ÷ 2 =	12 ÷ 6 =	16 ÷ 4 =	20 ÷ 5 =
7 ÷ 1 =	6 ÷ 5 =		16 ÷ 8 =	20 ÷ 10 =
8 ÷ 1 =	8 ÷ 2 =			
9 ÷ 1 =	8 ÷ 4 =			
10 ÷ 1 =	9 ÷ 3 =			

6. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆ.

1) 15 ಪೆನ್ನುಗಳನ್ನು ಒಬ್ಬನಿಗೆ ಎರಡರಂತೆ ಹಂಚಿದರೆ ಎಷ್ಟು ಮಂದಿಗೆ ಹಂಚಬಹುದು ಎಂದು ತಿಳಿದುಕೊಳ್ಳುವುದು. ಕೊನೆಗೆ ಎಷ್ಟು ಪೆನ್ನು ಉಳಿಯುತ್ತದೆ ಎಂದು ತಿಳಿಯುವುದು.

2) 15 (7
14
―
1

ಇಲ್ಲಿ 15 ಭಾಜ್ಯ, 2 ಭಾಜಕ, 7 ಭಾಗಲಬ್ಧ, 1 ಶೇಷ.

7. **ಮೌಲ್ಯಮಾಪನಾ ಚಟುವಟಿಕೆಗಳು** : ಹಿಂದಿನ ಮಾದರಿಗಳ ಜೊತೆ ಮಾಡಬಹುದಾದ ಚಟುವಟಿಕೆ:

ಒಂದು ಶಾಲೆಯಲ್ಲಿ 50 ಮಕ್ಕಳಿದ್ದರೆ, 6 ಮಕ್ಕಳ ಎಷ್ಟು ಗುಂಪುಗಳನ್ನು ಮಾಡಬಹುದು? ಗುಂಪಿಗೆ ಸೇರದೆ ಉಳಿಯುವ ಮಕ್ಕಳೆಷ್ಟು ?

8. **ಹೆಚ್ಚುವರಿ ಚಟುವಟಿಕೆಗಳು :**

1) ಜನರಲ್ಲಿರುವ ಮೂಢನಂಬಿಕೆಗಳನ್ನು ಪಟ್ಟಿ ಮಾಡುವುದು.

2) ಅವು ಏಕೆ ಮೂಢನಂಬಿಕೆಗಳೆಂದು ಚರ್ಚೆಮಾಡುವುದು.

ಪ್ರೇರಕರಿಗೆ ಸೂಚನೆಗಳು 16



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಜ್ಞಾನ : ಒಂದು ವಸ್ತು ಅಥವಾ ವಿಷಯದ ಬಗ್ಗೆ ನಿಜವಾದ ಪರಿಚಯ. ಹಳ್ಳಿಯ ಜ್ಞಾನದ ಸಂಗತಿಗಳು. ಅವನ್ನು ಹೇಗೆ ಕಾಪಾಡಬಹುದು? ನಮ್ಮ ಹಾಗೂ ನಮ್ಮ ಪರಿಸರದ ಬಗ್ಗೆ ಹೆಚ್ಚಿನ ಜ್ಞಾನವನ್ನು ಯಾವ ರೀತಿಯಿಂದ ತಿಳಿದುಕೊಳ್ಳಬಹುದು ? ಅದಕ್ಕೆ ನಾವು ಮಾಡಬೇಕಾದ ಕೆಲಸ ಕಾರ್ಯಗಳೇನು ?

2. **ಒತ್ತಕ್ಷರಗಳು** : ಕೆಲವು ಒತ್ತಕ್ಷರಗಳು ಮೂಲ ಅಕ್ಷರವನ್ನು ಹೋಲುತ್ತವೆ. ಅವುಗಳ ಪರಿಚಯದ ಬಗ್ಗೆ ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 50ನೇ ಪುಟ ನೋಡಿ. ಎಲ್ಲಾ ಅಕ್ಷರಗಳ ಒತ್ತಕ್ಷರಗಳನ್ನು ಬರೆಯುವುದು.

3. **ಶಬ್ದರಚನೆ** : ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 44-45 ಪುಟಗಳನ್ನು ನೋಡಿ. 16 ನೇ ಸೂತ್ರದ ಹೊಸ ಅಕ್ಷರಗಳೊಡನೆ ಇಷ್ಟರ ವರೆಗೆ ಕಲಿತ ಅಕ್ಷರಗಳನ್ನು ಸೇರಿಸಿ ಹೊಸ ಶಬ್ದಗಳನ್ನು ಕಂಡುಹಿಡಿಯಲಾಗುವುದು. ವಯಸ್ಕರು ಜೋಡಿಸಿದ ಶಬ್ದಗಳನ್ನು ಪ್ರೇರಕನು ಪ್ರತ್ಯೇಕವಾಗಿ ಬರೆದಿಡಬೇಕು.

4. **ವಾಕ್ಯರಚನೆ** : ಒಂದನೇ ಸೂತ್ರದಲ್ಲಿ ಕೊಟ್ಟ ವಿವರದ ಪ್ರಕಾರ ನಡೆದುಕೊಳ್ಳುವುದು. ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 45-46 ಪುಟಗಳನ್ನು ನೋಡಿ. ವಯಸ್ಕರು ರಚಿಸಿದ ವಾಕ್ಯಗಳನ್ನು ಪ್ರೇರಕನು ಬರೆದಿಡಬೇಕು.

5. **ಗಣಿತ** : ಭಿನ್ನಾಂಶ, ಶತಾಂಶಗಳ ಜ್ಞಾನ. ನಕ್ಷೆಗಳ ಮುಖಾಂತರ ಕೆಳಗಿನ ವಿಷಯಗಳನ್ನು ಸ್ಪಷ್ಟಪಡಿಸಿದರೆ ಬೇಗನೇ ಅರ್ಥ ಮಾಡಿಕೊಳ್ಳಬಹುದು.

ಪ್ರೇರಕ : "ಒಂದರಿಂದ ಎರಡನ್ನು ಎಷ್ಟು ಬಾರಿ ತೆಗೆಯಬಹುದು?" ಅಥವಾ "ಒಂದನ್ನು ಎರಡು ಭಾಗ ಮಾಡಿ ಒಂದು ಭಾಗ ತೆಗೆದರೆ ಎಷ್ಟು ಉಳಿಯುತ್ತದೆ?" ಅಥವಾ "ಒಂದು ರೊಟ್ಟಿಯನ್ನು ಎರಡು ಭಾಗ ಮಾಡಿ ಒಂದು ಭಾಗ ತಿಂದರೆ ಎಷ್ಟು ಉಳಿಯುತ್ತದೆ?"

ವಯಸ್ಕ : "ಅರ್ಧ". 1 ÷ 2 = 1/2. ಇದೇ 'ಅರ್ಧ' ಬರೆಯುವ ರೀತಿ. (ಇಲ್ಲಿ 1 ಅಂಶ, 2 ಛೇದ ಆಗಿದೆ).

ಪ್ರೇರಕ : "ಒಂದನ್ನು ಮೂರು ಭಾಗ ಮಾಡಿ ಎರಡು ಭಾಗ ತೆಗೆದರೆ ಎಷ್ಟು ಉಳಿಯಿತು?"

ವಯಸ್ಕ : "ಮೂರರಲ್ಲಿ ಒಂದು (ಮೂರನೇ ಒಂದು)". 1 ÷ 3 = 1/3 . (ಅದೇ ರೀತಿ 2/3)

ಪ್ರೇರಕ : ಒಂದನ್ನು ನಾಲ್ಕು ಭಾಗ ಮಾಡಿ ಮೂರು ಬಾಗ ತೆಗೆದರೆ ಎಷ್ಟು ಉಳಿಯಿತು?"

ವಯಸ್ಕ ; "ನಾಲ್ಕರಲ್ಲಿ ಒಂದು (ಕಾಲು)". 1 ÷ 4 = 1/4 .

ಪ್ರೇರಕ : "ಒಂದನ್ನು ನಾಲ್ಕು ಭಾಗ ಮಾಡಿ ಎರಡು ಭಾಗ ತೆಗೆದರೆ ಎಷ್ಟು ಉಳಿಯಿತು?"

ವಯಸ್ಕ : "ನಾಲ್ಕರಲ್ಲಿ ಎರಡು (ಅರ್ಧ)". 2 ÷ 4 = 2/4 = 1/2 .

ಪ್ರೇರಕ : "ಒಂದನ್ನು ನಾಲ್ಕು ಭಾಗ ಮಾಡಿ ಒಂದು ಭಾಗ ತೆಗೆದರೆ ಎಷ್ಟು ಉಳಿಯಿತು?"

ವಯಸ್ಕ : "ನಾಲ್ಕರಲ್ಲಿ ಮೂರು (ಮುಕ್ಕಾಲು)." 3/4 .

ಪ್ರೇರಕ : "ನನ್ನಲ್ಲಿರುವ ಹತ್ತು ಮಾವಿನಕಾಯಿಗಳಲ್ಲಿ ಒಂದನ್ನು ತಿಂದರೆ ಹತ್ತು ಮಾವಿನ ಕಾಯಿಗಳಲ್ಲಿ ಎಷ್ಟು ಮಾವಿನಕಾಯಿ ತಿಂದ ಹಾಗಾಯಿತು?"

ವಯಸ್ಕ : "ಹತ್ತರಲ್ಲಿ ಒಂದು." 1/10.

ಪ್ರೇರಕ : "ಒಂದನ್ನು ನೂರು ಭಾಗ ಮಾಡಿ ಖಾಲಿ ಒಂದು ಭಾಗ ಇಟ್ಟರೆ ಎಷ್ಟಾಯಿತು?"

ವಯಸ್ಕ : "ನೂರರಲ್ಲಿ ಒಂದು." 1/100.

ಪ್ರೇರಕ : "ನೂರರ ಭಾಗಕ್ಕೆ ಶೇಕಡ ಎಂದೂ ಹೇಳುತ್ತಾರೆ. ಅದರ ಚಿಹ್ನೆ - %

100 ರಲ್ಲಿ 1 ಭಾಗ :1/100 = 1%
100 ರಲ್ಲಿ 10 ಭಾಗ :10/100 = 10%
100 ರಲ್ಲಿ 50 ಭಾಗ :50/100 = 50%

- ಭಿನ್ನರಾಶಿ ಬರೆದು ದಶಮಾಂಶ ಬರೆಯುವ ರೀತಿಯನ್ನು ತಿಳಿಸುವುದು. ಉದಾ. : 3/10 = 0.3
- ನೂರರ ಭಿನ್ನರಾಶಿ ಬರೆದು ದಶಮಾಂಶ ರೀತಿಯಲ್ಲಿ ಬರೆಯುವ ರೀತಿಯನ್ನು ವಿವರಿಸುವುದು ಉದಾ. : 49/100 = 0.49
- ದಶಮಾಂಶಗಳನ್ನು ಭಿನ್ನರಾಶಿಗಳಿಗೆ ಪರಿವರ್ತಿಸುವ ರೀತಿಯನ್ನು ತಿಳಿಸುವುದು.
- ಭಿನ್ನರಾಶಿಗಳನ್ನು ಸುಲಭ ರೂಪಕ್ಕೆ ತರುವ ವಿಧಾನಗಳನ್ನು ಕಲಿಯುವುದು. ಅಂಶ ಮತ್ತು ಛೇದಗಳನ್ನು ಯಾವುದೋ ಒಂದು ಅಂಕಿ ಅಥವಾ ಸಂಖ್ಯೆಯಿಂದ ಪೂರ್ತಿಯಾಗಿ ಭಾಗಿಸುವುದು. ಉದಾ. : 30/100 = 3/10
- ಶೇಕಡಾವನ್ನು ಭಿನ್ನರಾಶಿಗೆ ಪರಿವರ್ತಿಸುವ ವಿಧಾನವನ್ನು ಕಲಿಸುವುದು. ಉದಾ. : 15% = 15/100.
- ಭಿನ್ನರಾಶಿಯನ್ನು ಶೇಕಡಾ ಕ್ರಮಕ್ಕೆ ಪರಿವರ್ತಿಸುವ ವಿಧಾನವನ್ನು ಕಲಿಯುವುದು. ಭಿನ್ನರಾಶಿಗೆ 100 ರಿಂದ ಗುಣಿಸಿದರೆ ಭಿನ್ನರಾಶಿಯ ಶೇಕಡಾ ರೂಪ ಸಿಗುತ್ತದೆ.

  ಉದಾ. : 3/10 ರ ಶೇಕಡಾ ರೂಪ ಅಂದರೆ 3/10 x 100 = 30%

(7ನೇ ಸಮಸ್ಯೆಯ 28ನೇ ಪುಟದಲ್ಲಿ ಮುಂದುವರಿಸಲಾಗಿದೆ)



1. **ಅರಿವು:** ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 32-39 ಪುಟಗಳನ್ನು ನೋಡಿ.

ಐಶ್ವರ್ಯ : ಶ್ರೀಮಂತ-ಬಡವ, ಶ್ರೀಮಂತ ರಾಷ್ಟ್ರ-ಬಡ ರಾಷ್ಟ್ರಗಳ ಸಂಬಂಧ, ಭೇದ. ಭೇದದ ಮೂಲ ಯಾವುದು? ಈ ಪರಿಸ್ಥಿತಿಯನ್ನು ಬದಲಾಯಿಸಬಹುದೋ?

2. **ಅಕ್ಷರಜ್ಞಾನ** : 'ರ' ರೂಪದ ಬದಲು ಅರ್ಕ ಚಿಹ್ನೆಯನ್ನು ಬಳಸುವ ಬಗ್ಗೆ ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ 1ರ 51ನೇ ಪುಟದಲ್ಲಿ ವಿವರಿಸಲಾಗಿದೆ.

3. ವ್ಯವಹಾರ ಗಣಿತ : ವಯಸ್ಕರ ಅನುಭವ ಮತ್ತು ಜ್ಞಾನವನ್ನು ಬಳಸಿಕೊಂಡೇ ಈ ಕೆಗಿನ ವಿಷಯುಗಳನ್ನು ಪ್ರೇರಕನು ವಯಸ್ಕರಲ್ಲಿ ಇನ್ನೂ ಖಚಿತಪಡಿಸಬಹುದು.

ಅಳತೆ: 1 ಮೀಟರಿಗೆ 100 ಸೆಂಟಿಮೀಟರುಗಳು; 1 ಕಿಲೋಮೀಟರಿಗೆ 100 ಮೀಟರುಗಳು. 1 ಅಡಿಗೆ 12 ಇಂಚುಗಳು; 1 ಗಜಕ್ಕೆ 3 ಅಡಿಗಳು; 1 ಫರ್ಲಾಂಗಿಗೆ 224 ಅಡಿಗಳು; 1 ಮೈಲಿಗೆ 8 ಫರ್ಲಾಂಗುಗಳು. 1 ಮೈಲು = 1.6 ಕಿಲೋಮೀಟರು.

ತೂಕ: 1 ಕಿಲೋಗ್ರಾಂ (ಕೆ. ಜಿ) ಗೆ 1000 ಗ್ರಾಂಗಳು

100 ಕೆಜಿಗಳಿಗೆ 1 ಕ್ವಿಂಟಾಲು. 10 ಕ್ವಿಂಟಾಲುಗಳಿಗೆ 1 ಮೆಟ್ರಿಕ್ ಟನ್.

ಗಾತ್ರ : 1 ಲೀಟರಿಗೆ 1000 ಮಿಲಿ ಲೀಟರುಗಳು

ಕಾಲ: 1 ನಿಮಿಷಕ್ಕೆ 60 ಸೆಕೆಂಡುಗಳು. 1 ಗಂಟೆಗೆ 60 ನಿಮಿಷಗಳು. 1 ದಿನಕ್ಕೆ 24 ಗಂಟೆಗಳು. 1 ವಾರಕ್ಕೆ 7 ದಿನಗಳು. 1 ತಿಂಗಳಿಗೆ 4 ವಾರಗಳು; 30 ಅಥವಾ 31 ದಿನಗಳು. ಫೆಬ್ರವರಿ ತಿಂಗಳಲ್ಲಿ ಸಾಮಾನ್ಯವಾಗಿ 28 ದಿನವಸಗಳು. ಆದರೆ ಪ್ರತಿ 4 ವರ್ಷಕ್ಕೆ 29 ದಿವಸಗಳು. 1 ವರ್ಷಕ್ಕೆ 52 ವಾರಗಳು; 365 ದಿವಸಗಳು- ಪ್ರತಿ 4 ವರ್ಷಗಳಿಗೆ 366 ದಿವಸಗಳು.

ಪಾಶ್ಚಾತ್ಯ ತಿಂಗಳುಗಳು: 1. ಜನವರಿ. 2. ಫೆಬ್ರವರಿ, 3. ಮಾರ್ಚ್, 4. ಏಪ್ರಿಲ್ 5. ಮೇ, 6. ಜೂನ್, 7. ಜುಲೈ, 8. ಆಗಸ್ಟ್, 9. ಸಪ್ಟೆಂಬರ್, 10. ಅಕ್ಟೋಬರ್, 11. ನವೆಂಬರ್, 12. ಡಿಸೆಂಬರ್

ನಕ್ಷತ್ರಗಳು	ತಿಂಗಳು	ಪಾಶ್ಚಾತ್ಯ ತಿಂಗಳು
ಉತ್ತರ ಭಾದ್ರ, ರೇವತಿ, ಅಶ್ವಿನಿ	ಚೈತ್ರ	ಮಾರ್ಚ್-ಏಪ್ರಿಲ್
ಅಶ್ವಿನಿ, ಭರಣಿ, ಕೃತ್ತಿಕ	ವೈಶಾಖ	ಏಪ್ರಿಲ್-ಮೇ
ಕೃತ್ತಿಕ, ರೋಹಿಣಿ, ಮೃಗಶಿರ	ಜೇಷ್ಠ	ಮೇ-ಜೂನ್
ಮೃಗಶಿರ, ಆರ್ದ್ರೆ, ಪುನರ್ವಸು	ಆಷಾಡ	ಜೂನ್-ಜುಲೈ
ಪುಷ್ಯ, ಆಶ್ಲೇಷ	ಶ್ರಾವಣ	ಜುಲೈ-ಆಗಸ್ಟ್
ಮಖೆ, ಪುಬ್ಬೆ	ಭಾದ್ರಪದ	ಆಗಸ್ಟ್-ಸೆಪ್ಟೆಂಬರ್
ಉತ್ತರ, ಹಸ್ತ ಚಿತ್ತೆ	ಅಶ್ವಿನಿ	ಸಪ್ಟೆಂಬರ್-ಅಕ್ಟೋಬರ್
ಚಿತ್ತೆ, ಸ್ವಾತಿ, ವಿಶಾಖೆ	ಕಾರ್ತಿಕ	ಅಕ್ಟೋಬರ್-ನವೆಂಬರ್
ವಿಶಾಖೆ, ಅನುರಾಧ, ಜೇಷ್ಠ	ಮಾರ್ಗಶಿರ	ನವೆಂಬರ್-ಡಿಸೆಂಬರ್
ಜೇಷ್ಠ, ಮೂಲ, ಪೂರ್ವಾಷಾಡ	ಪುಷ್ಯ	ಡಿಸೆಂಬರ್-ಜನೆವರಿ
ಉತ್ತರಾಷಾಡ, ಶ್ರವಣ, ಧನಿಷ್ಠೆ	ಮಾಘ	ಜನೆವರಿ-ಫ್ರುವರಿ
ಧನಿಷ್ಠೆ, ಶತಭಿಷ, ಪೂರ್ವಭಾದ್ರೆ	ಫಾಲ್ಗುಣ	ಫೆಬ್ರವರಿ-ಮಾರ್ಚ್

4. **ರೇಖಾಗಣಿತ:**

ಗೇಖೆಗಳು : ವಕ್ರರೇಖೆ (∼∼) : ಸರಳರೇಖೆ (——)

ಕೋನಗಳು : ಎರಡು ಸರಳ ರೇಖೆಗಳು ಒಂದು ಬಿಂದುವಿನಲ್ಲಿ ಸೇರಿದಾಗ ಆ 2 ರೇಖೆಗಳ ನಡುವೆ ಉಂಟಾಗುವ ಅಂತರ. ಲಘುಕೋನ (∠ 90^0 ಕ್ಕಿಂತ ಕಡಿಮೆ, ಲಂಬಕೋನ ∟ 90^0), ವಿಶಾಲಕೋನ (∠ 90^0 ಕ್ಕಿಂತ ಹೆಚ್ಚು), ಸರಳಕೋನ (— 180^0)

ರೇಖಾಕೃತಿಗಳು : ವೃತ್ತ (○), ತ್ರಿಭುಜ (△), ಚೌಕ (□), ಆಯುತ (▭)

ಘನಾಕೃತಿಗಳು: ಘನ (), ಆಯುತ ಘನ (), ಸ್ತಂಭಾಕೃತಿ (),

ಶಂಕು ()

5. **ಅಭ್ಯಾಸ ಚಟುವಟಿಕೆಗಳು:** ಹಿಂದಿನ ಮಾದರಿಗಳ ಜೊತೆ ಮಾಡುವ ಹೊಸ ಚಟುವಟಿಕೆಗಳು:

1) ದಾರ ಬಳಸಿ ವಕ್ರ ರೇಖೆ, ಸರಳ ರೇಖೆಗಳನ್ನು ಕಂಡುಹಿಡಿಯುವುದು.

2) ಬೆಂಕಿ ಕಡ್ಡಿಗಳನ್ನು ಒಂದಕ್ಕೊಂದು ಜೋಡಿಸಿ ಬೇರೆ ಬೇರೆ ಕೋನಗಳನ್ನು ತಿಳಿಯುವುದು.

3) ಕಲ್ಲುಗಳನ್ನು ಅಥವಾ ಬೀಜಗಳನ್ನು ಬಳಸಿ ಬೇರೆ ಬೇರೆ ರೇಖಾಕೃತಿಗಳನ್ನು ಮಾಡುವುದು.

4) ರಟ್ಟಿನಲ್ಲಿ ರೇಖಾಖೃತಿಗಳನ್ನು ಕತ್ತರಿಸುವುದು.

5) ಬೆಂಕಿಪೊಟ್ಟಣ, ಇಟ್ಟಿಗೆ, ಊದುಕೊಳವೆ, ಕ್ಯಾರೆಟೆಗಳನ್ನು ಬಳಸಿ ಆಕೃತಿಗಳನ್ನು ತಿಳಿಯುವುದು.

(8ನೇ ಸಮಸ್ಯೆಯ 30ನೇ ಪುಟ ಮತ್ತು 9ನೇ ಸಮಸ್ಯೆಯ 32ನೇ ಪುಟಗಳಲ್ಲಿ ಮುಂದುವರಿಸಲಾಗಿದೆ)

ಬಗೆಹರಿಸುವ ಶಿಕ್ಷಣ ಕ್ರಮದ ತತ್ವಗಳನ್ನೇ ಕೊನೆಯ ತನಕವೂ ಅನುಸರಿಸಲಾಗಿದೆ. ಆ ಶಿಕ್ಷಣ ಕ್ರಮದ ಮೂಲ ತತ್ವವೇನೆಂದರೆ ಯಾವುದೇ ಹೊಸ ಜ್ಞಾನವನ್ನು ಶಿಕ್ಷಕನು ತನ್ನ ದಾನವಾಗಿ ಶಿಕ್ಷಣಾರ್ಥಿಗಳಿಗೆ ನೀಡುವುದಿಲ್ಲ. ಬದಲಾಗಿ ಅದನ್ನು ಒಂದು ಸಮಸ್ಯೆಯನ್ನಾಗಿ ಕಲಿಯುವವರ ಮುಂದಿಡುತ್ತಾನೆ. ಆ ಸಮಸ್ಯೆಯನ್ನು ಬಗೆಹರಿಸುವುದರ ಮೂಲಕ ಅಥವಾ ಅದರ ಕೆಲವು ಸಂಗತಿಗಳನ್ನು ತಮ್ಮ ಬುದ್ಧಿ ಶಕ್ತಿಯಿಂದಲೇ ಕಂಡುಹಿಡಿಯುವುದರ ಮೂಲಕ ಹೊಸ ಜ್ಞಾನವನ್ನು ಅವರು ಗಳಿಸುತ್ತಾರೆ. ಒಂದು ರೀತಿಯಲ್ಲಿ ಹೇಳುವುದಾದರೆ ಈ ಶಿಕ್ಷಣ ಕ್ರಮದಲ್ಲಿ ಶಿಕ್ಷಕ-ಶಿಕ್ಷಾರ್ಥಿ ಎಂಬ ಭೇದವಿಲ್ಲ. ಎಲ್ಲರೂ ಶಿಕ್ಷಾರ್ಥಿಗಳೇ. ಆದರೆ ಪ್ರತಿಯೊಬ್ಬರ ಜ್ಞಾನದ ಮಟ್ಟದಲ್ಲಿ ವ್ಯತ್ಯಾಸವಿಲ್ಲವೆಂದಲ್ಲ. ಈ ಹೊಸ ಶಿಕ್ಷಣದ ಮತ್ತೊಂದು ಮುಖ್ಯ ಲಕ್ಷಣವೇನೆಂದರೆ ಕಲಿಯುವಿಕೆಯು ಕಲಿಯುವವರ ಜೀವನದಿಂದ ಹೊರತಾದುದಲ್ಲ. ಒಂದು ಜನಸಮುದಾದಯದ ಜೀವನ ಸಮಸ್ಯೆಗಳು ಅಥವಾ ಆಧಾರ ವಿಚಾರಗಳು ಕಲಿಯುವ ವಸ್ತುವಾಗಿವೆ. ತಮ್ಮ ಜೀವನವನ್ನು ಕಾಡುತ್ತಿದ್ದ ಸಮಸ್ಯೆಗಳ ನಿಜಸ್ವರೂಪವನ್ನು ಅರ್ಥಮಾಡಿಕೊಂಡು ಅವುಗಳನ್ನು ಬಗೆಹರಿಸಲು ಸೂಕ್ತ ಕಾರ್ಯಕ್ರಮ ಹಾಕುತ್ತಿರುವಾಗಲೇ ಕಲಿಯುವಿಕೆ ನೆರವೇರುತ್ತದೆ.

ಈ ರೀತಿಯ ಹೊಸ ಮಾದರಿಯ ವಯಸ್ಕರ ಶಿಕ್ಷಣವನ್ನು ನೇರವೇರಿಸಲು ಯೋಗ್ಯ ಪ್ರೇರಕರ ತರಬೇತಿ ಮಾಡಲು ಶಿಬಿರಗಳನ್ನು ಏರ್ಪಡಿಸಲಾಗುವುದು. ಆ ತರಬೇತಿ ಶಿಬಿರಗಳಲ್ಲಿ ಹೊಸ ಶಿಕಕ್ಷಣ ಕ್ರಮದ ಬಗ್ಗೆ ಪರಿಣತಿಯನ್ನು ಗಳಿಸುವುದರ ಜೊತೆಗೆ ಅಂತಹ ಶಿಕ್ಷಣ ಕ್ರಮಕ್ಕೆ ಅವಶ್ಯವಾಗಿರುವ ಸ್ವಅರಿವು ಹಾಗೂ ಸಾಮಾಜಿಕ ವಿಶ್ಲೇಷಣೆಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು.

ಅರಿವಿನ ಜಾಗೃತಿ ಮತ್ತು ಸಾಕ್ಷರತೆ ಪುಸ್ತಕಮಾಲೆಯ ಕುರಿತು

ಅರಿವಿನ ಜಾಗೃತಿ ಮತ್ತು ಸಾಕ್ಷರತೆ, ಭಾಗ ೧ : ತಾತ್ವಿಕ ವಿಷಯಗಳು ಮತ್ತು ರೂಪರೇಷೆಗಳು ಎಂಬ ಕಿರುಹೊತ್ತಿಗೆ ಎರಡು ಪ್ರಬಂಧಗಳನ್ನೊಳಗೊಂಡಿದೆ. ಮೊದಲನೆಯದರಲ್ಲಿ ಪಾಲೂಲೊ ಫ್ರೇರೆಯು ಬರೆದ ದಮಿತರ ಶಿಕ್ಷಣ ಕ್ರಮ (Pedagogy of the Oppressed)ಎಂಬ ಪುಸ್ತಕದಲ್ಲಿಯ ವಿಚಾರಗಳು ಸಂಕ್ಷಿಪ್ತವಾಗಿ ಬರುತ್ತವೆ. ಹಾಗೂ ಅವರು ಸಿದ್ಧಪಡಿಸಿದ ಅರಿವಿನ ಜಾಗೃತಿಯ ರೂಪರೇಷೆಯನ್ನು ಅದರಲ್ಲಿ ಕೊಟ್ಟಿದೆ. ಅವೇ ತತ್ವಗಳನ್ನು ಅನುಸರಿಸಿ ಕರ್ನಾಟಕದ ಹಳ್ಳಿಗಳ ಪರಸ್ಥಿತಿಗೆ ಹಾಗೂ ಕನ್ನಡ ಭಾಷೆಗೆ ಅನ್ವಯಿಸುವಂತೆ ಯಾವ ರೀತಿಯಲ್ಲಿ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯನ್ನು ನಡೆಸಿಕೊಂಡು ಹೋಗಬಹುದು ಎಂಬುದರ ಬಗ್ಗೆ ವಿವೇಚನೆ ಎರಡನೇ ಪ್ರಬಂಧದಲ್ಲಿ ಬರುತ್ತದೆ.

ಮೊದಲ ಭಾಗಕ್ಕೆ ಪೂರಕವಾಗಿ ಇನ್ನು ಕೆಲವು ಭಾಗಗಳು ಬರುತ್ತವೆ. ಎರಡನೇ ಭಾಗದಲ್ಲಿ ಪ್ರೇರಕನು ಅರಿವಿನ ಜಾಗೃತಿ ಮತ್ತು ಸಾಕ್ಷರತೆಯನ್ನು ಯಾವ ರೀತಿಯಲ್ಲಿ ಒಂದು ಹಳ್ಳಿಯಲ್ಲಿ ನಡೆಸಿಕೊಂಡು ಹೋಗಬೇಕು ಎಂಬುದರ ಬಗ್ಗೆ ಸಲಹೆ ಸೂಚನೆಗಳು ಕೊಡಲ್ಪಟ್ಟಿವೆ. ಅರಿವಿನ ಜಾಗೃತಿ ಮತ್ತು ಸಾಕ್ಷರತೆಯನ್ನು ನೆರವೇರಿಸಲು ಅಗತ್ಯವಿದ್ದ ಚಿತ್ರ ರೂಪದ ಸೂತ್ರಗಳೂ ಅಕ್ಷರಪಟಗಳೂ ಅದರಲ್ಲಿ ಬರುತ್ತವೆ. ಮತ್ತೊಂದು ಭಾಗದಲ್ಲಿ ಪ್ರತಿಯೊಂದು ಸೂತ್ರದ ವಿಷಯದ ಮೇಲೆ ಸಾಮಾಜಿಕ ವಿಶ್ಲೇಷಣೆ ಹಾಗೂ ಅದರ ಬಗ್ಗೆ ಅಂಕಿ ಅಂಶಗಳನ್ನೊಳಗೊಂಡ ಪ್ರಬಂಧವಿರುವುದು. ಈ ಭಾಗ ಇನ್ನೂ ಸಿದ್ಧಪಡಿಸಲಿದೆ. ಆನೇಕಲ್ ತಾಲ್ಲೂಕಿನಲ್ಲಿ ೧೯೮೮ರಲ್ಲಿ ನಂಅರಿವಿನ ಜಾಗೃತಿ ಮತ್ತು ಸಾಕ್ಷರತೆ ಪುಸ್ತಕಮಾಲೆಯ ಕುರಿತು ಆನೇಕಲ್ ತಾಲ್ಲೂಕಿನಲ್ಲಿ ೧೯೮೮ರಲ್ಲಿ ನಡೆಸುತ್ತಿರುವ ಸಾಕ್ಷರತಾ ಆಂದೋಲನದ ಪ್ರಯುಕ್ತ ೩ನೇ ಭಾಗವಾಗಿ ಇನ್ನೊಂದು ಭಾಗವನ್ನು ಸಿದ್ಧಪಡಿಸಲಾಗಿದೆ. ಅದು ಕಲಿಯುವವನ ಸಂಗಾತಿ ಭಾಗ ೨ರ ಮುಖ್ಯ ಅಂಶಗಳನ್ನೊಳಗೊಂಡಿದ್ದು, ಕಲಿತ ಹೊಸ ಅಕ್ಷರಗಳನ್ನು ರೂಢಿಸಿಕೊಳ್ಳಲು ಜೋಡಿಸಿದ ಹೊಸ ಪದ ಹಾಗೂ ವಾಕ್ಯಗಳನ್ನು ಬರೆದುಕೊಳ್ಳಲು ಅದರಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಲಿಯುವ ವಯಸ್ಕರು ಯಾವಾಗಲೂ ಅದನ್ನು ತಮ್ಮೊಡನೆ ಕೊಂಡೊಯ್ಯಲು ತಮ್ಮ ಜೇಬಿನಲ್ಲಿ ಇಟ್ಟುಕೊಳ್ಳುವಂತೆ ಅದರ ಆಕಾರವಿದೆ.

ಕನ್ನಡಕ್ಕೆ ಅನ್ವಯಿಸುವಂತೆ ನಡೆಸಬಹುದಾದ ಅರಿವಿನ ಜಾಗೃತಿ ಮತ್ತು ಸಾಕ್ಷರತೆಯ ಕಾರ್ಯಕ್ರಮದ ರೂಪರೇಷೆ ಕೆಲವು ವರ್ಷಗಳ ಪ್ರಯೋಗದ ಪ್ರತಿಫಲವಾಗಿದೆ. ಇಷ್ಟರವರೆಗೆ ಪಾಲುಲೊ ಫ್ರೇರೆಯ ಅರಿವಿನ ಜಾಗೃತಿಯ ರೂಪರೇಷೆಗಳನ್ನು ಆಧರಿಸಿ ಭಾರತೀಯ ಭಾಷೆಗಳ ಲಿಪಿಗಳನ್ನು ಕಲಿಯಲು ಹಲವಾರು ಪ್ರಯೋಗಗಳು ಈಗಾಗಲೇ ನಡೆದಿದ್ದರೂ ಕನ್ನಡದಲ್ಲಿ ಮಾಡಿದ ಅಂತಹ ಪ್ರಯತ್ನ ಹೆಚ್ಚು ಸಮಂಜವೂ ಸಂಪೂರ್ಣವೂ ಆಗಿದೆ.

ಉಳಿದ ಕೆಲವು ಭಾರತೀಯ ಭಾಷೆಗಳಲ್ಲಿ ಫ್ರೇರೆಯ ತತ್ವಗಳನ್ನು ಅಳವಡಿಸಲು ಮಾಡಿದ ಪ್ರಯತ್ನಗಳಲ್ಲಿ ಕೊನೆಯ ತನಕವೂ ಆ ತತ್ವಗಳನ್ನು ಸಂಪೂರ್ಣವಾಗಿ ಬಳುಸುವುದರಲ್ಲಿ ಅಷ್ಟೊಂದು ಯಶಸ್ಸು ಕಂಡು ಬಂದಿಲ್ಲ. ಭಾರತದ ಯಾವುದೇ ಭಾಷೆಯ ಹಾಗೆ ಕನ್ನಡ ಭಾಷೆಯ ಲಿಪಿ ವ್ಯವಸ್ಥೆಯಲ್ಲಿ ಹಲವಾರು ತೊಡಕಿನ ವಿಷಯಗಳಿವೆ. ಐರೋಪ್ಯ ಭಾಷೆಗಳ ಹಾಗೆ ಅದರ ವರ್ಣಮಾಲೆಯ ಅಕ್ಷರಗಳ ಸಂಖ್ಯೆ ಕಡಿಮೆಯಲ್ಲ. ವರ್ಣಸಂಯೋಜನೆ ಅಕ್ಷರಗಳನ್ನು ಕೇವಲ ಒಂದಕ್ಕೊಂದು ಹೊಂದಿಸಿ ಬರೆಯುವ ಪ್ರಶ್ನೆಯಲ್ಲ. ಆದರೂ ಸಂವಾದದ ಮೂಲಕ ಸಮಸ್ಯೆಯನ್ನು

(ಕವಚದ ಒಳಬದಿಯಲ್ಲಿ ಮುಂದುವರಿದಿದೆ)